ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಮಾರ್ಚ್ 21, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 310 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



ಚಿತ್ರಗಳು: ರಫೀಕ್, ಜನತಾವಾಣಿ







# ಸಂಪ್ರದಾಯದಂತೆ ದುಗ್ಗಮ್ಮನ ಜಾತ್ರೆ

ದಾವಣಗೆರೆ, ಮಾ. 20- ನಗರ ದೇವತೆ ದುರ್ಗಾಂಬಿಕಾ ದೇವಿ ಜಾತ್ರೆಯು ಪ್ರತಿ ವರ್ಷದ ಸಂಪ್ರದಾಯದಂತೆ ಬುಧವಾರವೂ ನೆರವೇರಿತು. ನಸುಕಿನಲ್ಲಿ ದೇವಿಗೆ ಬಲಿಯ ಭಕ್ತಿ ಸಮರ್ಪಣೆ ನಡೆಯುತ್ತಿದ್ದಂತೆ ಚರಗ ಚೆಲ್ಲಲಾಯಿತು.

ಒಂದೆಡೆ ಶಾಸ್ತ್ರ, ಸಂಪ್ರದಾಯಗಳು ಎಂದಿನಂತೆ ಪೂಜಾ ಕಾರ್ಯಗಳು ನಡೆಯುತ್ತಿದ್ದರೆ, ದೇವಸ್ಥಾನದತ್ತ ಭಕ್ತರ ದಂಡೇ ಹರಿದು ಬರಲಾರಂಭಿಸಿತ್ತು. ಉಧೋ ಉಧೋ ದುಗ್ಗಮ್ಮ ಎಂದು ಭಕ್ತಿ ಪರವಶರಾಗಿ ಭಕ್ತರು ಕೂಗುತ್ತಿದ್ದರು. ತಾವು ಹೊತ್ತಿದ್ದ ಹರಕೆ ತೀರಿಸಿದರು.

ಜನರ ಭಕ್ತಿಯ ಮುಂದೆ ಬಿಸಿಲು ಲೆಕ್ಕಕ್ಕೇ ಇಲ್ಲವೆನ್ನುವಂತಾಗಿತ್ತು. ಮಕ್ಕಳು, ಮಹಿಳೆಯರು, ವೃದ್ದರು ಸರದಿ ಸಾಲಿನಲ್ಲಿ ನಿಂತು ದೇವಿ ದರ್ಶನ ಪಡೆದರು. ಹಣವಿದ್ದವರು, ವಿಐಪಿ ಪಾಸ್ ಇದ್ದವರು ತುಸು ಹತ್ತಿರದ ಸಾಲಿನಲ್ಲಿ ನಿಲ್ಲುತ್ತಿದ್ದರು. ಜನರ ನಿಯಂತ್ರಣಕ್ಕೆ ಪೊಲೀಸರು ಹರ ಸಾಹಸ ಪಡುತ್ತಿದ್ದುದು ಕಂಡು ಬಂತು. ದೇವಸ್ಥಾನದ ಮುಂಭಾಗ ವಿವಿಧ ಆಭರಣ, ಆಟಿಕೆಗಳ ಖರೀದಿಯೂ ಜೋರಾಗಿತ್ತು.

ಇತ್ತ ದಾವಣಗೆರೆ ನಗರದಲ್ಲಿ ಮುಂಜಾನೆಯಿಂದ ಉಸಿರು ನಿಲ್ಲಿಸಿದ ಕೋಳಿ-ಕುರಿಗಳಿಗೆ ಲೆಕ್ಕವೇ ಇರಲಿಲ್ಲ. ಮನೆಗಳ ಮುಂದೆ ರಕ್ತದ (4ನೇ ಪುಟಕ್ಕೆ)

**ಹಿರಿಯ ಶಾಸಕಶಾಮನೂರು ಶಿವಶಂಕರಪ್ಪ ಅವರು ಬುಧವಾರ ಸಂಜೆ ದೇವಸ್ಥಾನಕ್ಕೆ ಆಗಮಿಸಿ ದುರ್ಗಾಂಬಿಕಾ ದೇವಿ ದರ್ಶನ ಪಡೆದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಅವರ ಪತ್ನಿ ಡಾ.ಪ್ರಭಾ ಮಲ್ಲಿಕಾರ್ಜುನ್, ಉದ್ಯಮಿ ಎಸ್.ಎಸ್. ಗಣೇಶ್ ಹಾಗೂ ಕುಟುಂಬದವರು ಮಂಗಳವಾರವೇ ದೇವಿ ದರ್ಶನ ಪಡೆದಿದ್ದರು.**

## ಮೊದಲ ಹಂತಕ್ಕೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭ

ನವದೆಹಲಿ, ಮಾ. 20 – ಮೊದಲ ಹಂತದ ಲೋಕಸಭಾ ಚುನಾವಣೆಗಾಗಿ ಅಧಿಸೂಚನೆ ಹೊರಡಿಸಲಾಗಿದೆ. 21 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 102 ಲೋಕಸಭಾ ಕ್ಷೇತ್ರಗಳ ಚುನಾವಣೆಗೆ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಿದೆ.

ಅರುಣಾಚಲ ಪ್ರದೇಶ, ಅಸ್ಸಾಂ, ಬಿಹಾರ, ಛತ್ತೀಸ್‌ಘಡ, ಮಧ್ಯ ಪ್ರದೇಶ, ಮಹಾರಾಷ್ಟ್ರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ರಾಜಸ್ಥಾನ, ಸಿಕ್ಕಿಂ, ತಮಿಳುನಾಡು, ತ್ರಿಪುರ, ಉತ್ತರ ಪ್ರದೇಶ, ಉತ್ತರಾಖಂಡ, ಪಶ್ಚಿಮ ಬಂಗಾಳ, ಅಂಡಮಾನ್ ಹಾಗೂ ನಿಕೋಬಾರ್, ಜಮ್ಮು ಮತ್ತು ಕಾಶ್ಮೀರ, ಲಕ್ಷದ್ವೀಪ ಹಾಗೂ ಪುದುಚೆರಿಗಳಲ್ಲಿ ಚುನಾವಣೆ ನಡೆಯಲಿದೆ.

ನಾಮಪತ್ರ ದಾಖಲಿಸಲು ಮಾರ್ಚ್ 27 ಕೊನೆಯ ದಿನವಾಗಿದೆ. ಆದರೆ, (4ನೇ ಪುಟಕ್ಕೆ)

## ಮಾ. 31ರಂದು ಬ್ಯಾಂಕ್‌ಗೆ ರಜೆ ಇಲ್ಲ: ಆರ್‌ಬಿಐ




ನವದೆಹಲಿ, ಮಾ. 20 - ದೇಶಾದ್ಯಂತ ವಾರ್ಷಿಕ ಲೆಕ್ಕ ಪತ್ರಗಳ ಕ್ಲೋಸಿಂಗ್ ದಿನವಾಗಿರುವ ಕಾರಣಕ್ಕೆ ಮಾರ್ಚ್ 31ರ ಭಾನುವಾರದಂದು ದೇಶದ ಎಲ್ಲಾ ಬ್ಯಾಂಕ್‌ಗಳು ಸಾರ್ವಜನಿಕರಿಗೆ ಮುಕ್ತವಾಗಿರಲಿದೆ ಎಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬುಧವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಏಜೆನ್ಸಿ ಬ್ಯಾಂಕ್‌ಗಳು ಮಾರ್ಚ್ 31 ರಂದು ಸರ್ಕಾರಿ ವ್ಯವಹಾರಗಳನ್ನು ತೆರೆದಿಡಬೇಕು ಎಂದು ಆರ್‌ಬಿಐ ಹೇಳಿದೆ.

ಕೇಂದ್ರ ಸರ್ಕಾರ ಈ ಕುರಿತಾಗಿ ಆರ್‌ಬಿಐಗೆ ಮನವಿ ಮಾಡಿದ್ದು, ಸರ್ಕಾರಿ ವ್ಯವಹಾರಗಳನ್ನು ಹೊಂದಿರುವ ದೇಶದ ಎಲ್ಲಾ ಬ್ಯಾಂಕ್‌ಗಳು ಮಾರ್ಚ್ 31ರ ಭಾನುವಾರದಂದು ತೆರೆದಿರಬೇಕು ಎಂದು ಹೇಳಿದೆ. ಆ ಮೂಲಕ 2023-24ರ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಸರ್ಕಾರಿ ವ್ಯವಹಾರಗಳನ್ನು ಮುಗಿಸುವ ಇರಾದೆ ಹೊಂದಿದೆ. ಇದರಿಂದಾಗಿ ಸರ್ಕಾರಿ ವ್ಯವಹಾರಗಳನ್ನು (4ನೇ ಪುಟಕ್ಕೆ)

# ಸಚಿವರು, ಸಂಬಂಧಿಗಳಿಗೆ 'ಕೈ' ಮಣೆ

ಬೆಂಗಳೂರು, ಮಾ. 20 - ಮಂತ್ರಿಗಳು, ಪಕ್ಷದ ಹಿರಿಯ ಮುಖಂಡರ ಸಂಬಂಧಿಕರೇ ರಾಜ್ಯದ ಲೋಕಸಭೆಯ ಬಹುತೇಕ ಕ್ಷೇತ್ರಗಳಿಗೆ ಕಾಂಗ್ರೆಸ್ ಕಲಿಗಳಾಗಲಿದ್ದಾರೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ ಏಳು ಕ್ಷೇತ್ರಗಳಿಗೆ ಮೊದಲ ಪಟ್ಟಿ ಬಿಡುಗಡೆ ಮಾಡಿದ್ದ ಕಾಂಗ್ರೆಸ್, ಉಳಿದ 21 ಕ್ಷೇತ್ರಗಳಿಗೆ ಹಿರಿಯ ನಾಯಕು ಹಾಗೂ ಸಚಿವರ ಕುಟುಂಬದವರಿಗೆ ಮಣೆ ಹಾಕಿದೆ.

ಶೇಕಡ 60 ರಷ್ಟು ಕ್ಷೇತ್ರಗಳಲ್ಲಿ ಸಚಿವರು ಮತ್ತು ಅಧಿಕಾರಸ್ಥರ ಮಕ್ಕಳು ಮತ್ತು ಸಂಬಂಧಿಕರಿಗೆ ಟಿಕೆಟ್ ನೀಡಲಾಗಿದೆ. ಮೊದಲ ಪಟ್ಟಿಯಲ್ಲೂ ಎರಡು ಕ್ಷೇತ್ರಗಳಲ್ಲಿ ಕುಟುಂಬ ರಾಜಕಾರಣಕ್ಕೆ ಅವಕಾಶ ಮಾಡಿಕೊಡಲಾಗಿತ್ತು.

ಪಕ್ಷದ ಕಾರ್ಯಕರ್ತರಿಗೆ ದೊರೆತಿರುವುದು ಬೆರಳೆಣಿಕೆ ಕ್ಷೇತ್ರಗಳಿಗೆ ಮಾತ್ರ. ಉಳಿದವೆಲ್ಲವೂ ಉದ್ದಿಮೆದಾರರು ಮತ್ತು ರಾಜಕಾರಣಿಗಳ ಕುಟುಂಬಗಳವರಿಗೆ ದೊರೆತಿದೆ.

ಕಳೆದ ಎರಡು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಕ್ಷದ ವರಿಷ್ಠರೊಂದಿಗೆ ಚರ್ಚಿಸಿ, ರಾಜ್ಯದ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಿ ನಗರಕ್ಕೆ ಹಿಂತಿರುಗಿದ್ದಾರೆ.

**ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್ ಪತ್ನಿ ಡಾ.ಪ್ರಭಾ ಮಲ್ಲಿಕಾರ್ಜುನ್ (ದಾವಣಗೆರೆ), ರಾಮಲಿಂಗಾರೆಡ್ಡಿ ಪುತ್ರಿ ಸೌಮ್ಯರೆಡ್ಡಿ (ಬೆಂಗಳೂರು ದಕ್ಷಿಣ), ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕಾ ಜಾರಕಿಹೊಳಿ (ಚಿಕ್ಕೋಡಿ), ಲಕ್ಷ್ಮೀ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಹೆಬ್ಬಾಳ್ಕರ್ (ಬೆಳಗಾವಿ), ಶಿವಾನಂದ ಪಾಟೀಲ್ ಪುತ್ರಿ ಸಂಯುಕ್ತಾ ಶಿವಾನಂದ ಪಾಟೀಲ್ (ಬಾಗಲಕೋಟೆ), ಈಶ್ವರ್ ಖಂಡ್ರೆ ಪುತ್ರ ಸಾಗರ್ ಖಂಡ್ರೆ (ಬೀದರ್) ಕಣಕ್ಕಿಳಿಯಲಿದ್ದಾರೆ.**

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮ ಅಳಿಯ ರಾಧಾಕೃಷ್ಣ ದೊಡ್ಡಮನಿ ಅವರನ್ನು ಕಲಬುರಗಿ ಕ್ಷೇತ್ರದಿಂದ ಕಣಕ್ಕಿಳಿಸಲಾಗುತ್ತಿದೆ.

ಸಚಿವರಾದ ಕೃಷ್ಣಬೈರೇಗೌಡ, ಡಾ.ಸುಧಾಕರ್ ಅವರ ಸೋದರ ಸಂಬಂಧಿ ಪ್ರೊ.ರಾಜೀವ್‌ಗೌಡ (ಬೆಂಗಳೂರು ಉತ್ತರ) ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಮಹಾರಾಷ್ಟ್ರ ಕಾಂಗ್ರೆಸ್‌ನ ಪ್ರಭಾವಿ ನಾಯಕರ ಪುತ್ರಿ ಹಾಗೂ ಪೊಲೀಸ್ ಅಧಿಕಾರಿ ಹೇಮಂತ್ ನಿಂಬಾಳ್ಕರ್ ಪತ್ನಿ ಅಂಜಲಿ ನಿಂಬಾಳ್ಕರ್ (ಉತ್ತರ ಕನ್ನಡ) ಅವರನ್ನು ಕಣಕ್ಕಿಳಿಸಿದೆ.

ಕಾಂಗ್ರೆಸ್‌ನ ಹಿರಿಯ ಸದಸ್ಯ ಹಾಗೂ ಉಪ ಸಭಾಪತಿಯಾಗಿದ್ದ ಕೆ. ರೆಹಮಾನ್ ಖಾನ್ ಪುತ್ರ ಮನ್ಸೂರ್ ಅಲಿ ಖಾನ್ (ಬೆಂಗಳೂರು ಉತ್ತರ) ಕಣದಲ್ಲಿದ್ದಾರೆ.

ಪಕ್ಷಕ್ಕೆ ದುಡಿದ ಕೆಲವೇ ಕಾರ್ಯಕರ್ತರಿಗೆ ಅವಕಾಶ ಮಾಡಿಕೊಟ್ಟಿರುವವರಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರವು ಹಿರಿಯ ಕಾರ್ಯಕರ್ತರಿಗೆ ದೊರೆತಿದೆ. ಈ ಕ್ಷೇತ್ರದಿಂದ ಪಕ್ಷದ ವಕ್ತಾರ ಲಕ್ಷ್ಮಣ್ ಕಣಕ್ಕಿಳಿಯುತ್ತಿದ್ದಾರೆ. ಇನ್ನು ದಕ್ಷಿಣ ಕನ್ನಡದಿಂದ ಪದ್ಮರಾಜ್ ಪಾಟೀಲ್, ಉಡುಪಿ- (4ನೇ ಪುಟಕ್ಕೆ)

# ನಾಳೆ ಬಿಜೆಪಿಯ ಉಳಿದ ಅಭ್ಯರ್ಥಿಗಳ ನಿರ್ಧಾರ

ಬೆಂಗಳೂರು, ಮಾ. 20 - ಕರ್ನಾಟಕ ಲೋಕಸಭೆಗೆ ಉಳಿದಿರುವ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಮಾರ್ಚ್ 22ರಂದು ಶುಕ್ರವಾರ ಬಿಡುಗಡೆ ಮಾಡಲಿದೆ.

ಅಭ್ಯರ್ಥಿಗಳ ಆಯ್ಕೆ ರಾಜ್ಯ ಜೆಡಿಎಸ್ ಜೊತೆಗಿನ ನಂಟನ್ನು ಮತ್ತಷ್ಟು ಗಟ್ಟಿಗೊಳಿಸಲು ಪಕ್ಷದ ನಾಯಕ ಬಿ.ಎಸ್.ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ದೆಹಲಿಯಲ್ಲಿ ಮೊಕ್ಕಾಂ ಹೂಡಿದ್ದಾರೆ.

ರಾಜ್ಯದ 28 ಕ್ಷೇತ್ರಗಳ ಪೈಕಿ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿರುವ ಬಿಜೆಪಿ, ಜೆಡಿಎಸ್‌ಗೆ ಮೂರು ಸ್ಥಾನಗಳನ್ನು ನೀಡಿದರೆ, ಉಳಿದ ಐದು ಸ್ಥಾನಗಳಿಗಷ್ಟೇ ಅಭ್ಯರ್ಥಿಗಳನ್ನು ಪ್ರಕಟಿಸಬೇಕಿದೆ.

ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ವರಿಷ್ಠರೊಂದಿಗೆ ಚರ್ಚೆ ನಡೆಸುವ ಸಂಬಂಧ ದೆಹಲಿಗೆ ತೆರಳುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಯಡಿಯೂರಪ್ಪ, ಬಾಕಿ ಇರುವ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಶುಕ್ರವಾರ ಹೊರಬೀಳಲಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡ ಅವರೊಂದಿಗೆ ಚರ್ಚಿಸಿ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲಾಗುವುದು. ಅಭ್ಯರ್ಥಿಗಳ ಆಯ್ಕೆ (4ನೇ ಪುಟಕ್ಕೆ)



## ಸಂಭ್ರಮದ ಕೂಲಹಳ್ಳಿ ಶ್ರೀ ಗೋಣಿಬಸವೇಶ್ವರ ರಥೋತ್ಸವ

ಹರಪನಹಳ್ಳಿ, ಮಾ.20- ತಾಲ್ಲೂಕಿನ ಐತಿಹಾಸಿಕ ಪ್ರಸಿದ್ಧ ಕೂಲಹಳ್ಳಿ ಶ್ರೀ ಗೋಣಿಬಸವೇಶ್ವರ ರಥೋತ್ಸವವು ಬುಧವಾರ ಸಂಜೆ 5.12ಕ್ಕೆ ಅಪಾರ ಭಕ್ತರ ಮಧ್ಯೆ ವೈಭವದಿಂದ ಜರುಗಿತು.

ಗ್ರಾಮದ ಹೊರವಲಯದಲ್ಲಿ ನಿರ್ಮಿಸಿದ್ದ ಆಕರ್ಷಕ ರಥಕ್ಕೆ ಕೆಂಪು, ಬಿಳಿ ಸೇರಿದಂತೆ ವಿವಿಧ ಬಣ್ಣಗಳ ಬಾವುಟ ಹಾಗೂ ಹಲವು ದೇವತೆಗಳ ಭಾವಚಿತ್ರ, ಬಾಳೆದಿಂಡು, ಮಾವಿನ ತೋರಣ ಹಾಗೂ ಪುಷ್ಪ ಮಾಲೆಯೊಂದಿಗೆ ಅಲಂಕರಿಸಲಾಗಿತ್ತು.

ಮಠದ ಪೀಠಾಧಿಪತಿ ಪಟ್ಟದ (4ನೇ ಪುಟಕ್ಕೆ)

## ಆರ್ಥಿಕ ಬಿಕ್ಕಟ್ಟು : ವೇತನ ಪಡೆಯದಿರಲು ಪಾಕ್ ಸಂಪುಟದ ನಿರ್ಧಾರ

ಇಸ್ಲಾಮಾಬಾದ್, ಮಾ. 20 – ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ವೇತನ ಹಾಗೂ ಸಂಬಂಧಿತ ಭತ್ಯೆಗಳನ್ನು ಕೈ ಬಿಡಲು ಪಾಕಿಸ್ತಾನದ ಪ್ರಧಾನ ಮಂತ್ರಿ ಶೆಬಾಜ್ ಷರೀಫ್ ಹಾಗೂ ಅವರ ಸಂಪುಟ ಸಹೋದ್ಯೋಗಿಗಳು ನಿರ್ಧರಿಸಿದ್ದಾರೆ. ಅನಗತ್ಯ ಖರ್ಚುಗಳನ್ನು ಕಡಿಮೆ ಮಾಡುವ ಕ್ರಮಗಳ ಭಾಗವಾಗಿ ವೇತನ ಕೈ ಬಿಡಲಾಗುತ್ತಿದೆ ಎಂದು ಪ್ರಧಾನ ಮಂತ್ರಿ ಕಚೇರಿ ತಿಳಿಸಿದೆ.

ಸರ್ಕಾರಿ ಹಣದಲ್ಲಿ ವಿದೇಶ ಪ್ರವಾಸ ಕೈಗೊಳ್ಳುವುದರ ಮೇಲೆ ಈಗಾಗಲೇ ನಿರ್ಬಂಧ ಹೇರಲಾಗಿದೆ. ಆದರೆ, ಈ ಕ್ರಮಗಳು ಕೇವಲ ಸಾಂಕೇತಿಕವಾಗಿವೆ. ಇದರಿಂದ ಪಾಕಿಸ್ತಾನದ ಆರ್ಥಿಕ ಹೊರೆ ಕಡಿಮೆ ಮಾಡುವಲ್ಲಿ ಹೆಚ್ಚೇನೂ ನೆರವಾಗುವುದಿಲ್ಲ.

# ಉಚಿತ ಕೊಡುಗೆ ಪ್ರಶ್ನಿಸಿ ಅರ್ಜಿ

## ಇಂದು ಸುಪ್ರೀಂ ಕೋರ್ಟ್ ವಿಚಾರಣೆ

ನವದೆಹಲಿ, ಮಾ. 20 - ರಾಜಕೀಯ ಪಕ್ಷಗಳು ಚುನಾವಣಾ ಸಮಯದಲ್ಲಿ ನೀಡುವ ಉಚಿತ ಕೊಡುಗೆಗಳ ಭರವಸೆಗಳನ್ನು ಪ್ರಶ್ನಿಸಿ ದಾಖಲಾಗಿರುವ ಸಾರ್ವಜನಿಕ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಸಮ್ಮತಿಸಿದೆ. ಮುಂಬರುವ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಈ ಕ್ರಮ ಪ್ರಾಮುಖ್ಯತೆ ಪಡೆದುಕೊಂಡಿದೆ.

ಉಚಿತ ಕೊಡುಗೆಗಳ ಭರವಸೆ ನೀಡುವ ಪಕ್ಷಗಳ ಚಿಹ್ನೆ ತಡೆಯಲು ಹಾಗೂ ಅವುಗಳ ನೋಂದಣಿ ರದ್ದುಗೊಳಿಸಲು ಕ್ರಮ ತೆಗೆದುಕೊಳ್ಳಲು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಲಾಗಿದೆ.

ಇದು ಪ್ರಮುಖ ವಿಷಯವಾಗಿದೆ. ಈ ಬಗ್ಗೆ ನಾಳೆ ವಿಚಾರಣೆ ನಡೆಸುತ್ತೇವೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, (4ನೇ ಪುಟಕ್ಕೆ)

# ಮಹಿಳೆಗೆ 1 ಸಾವಿರ ರೂ., 370ನೇ ವಿಧಿ ಮತ್ತೆ ಜಾರಿ

ಚೆನ್ನೈ, ಮಾ. 20 - ಪ್ರತಿಪಕ್ಷಗಳ ಐ.ಎನ್.ಡಿ.ಐ.ಎ. ಒಕ್ಕೂಟದ ಪರವಾಗಿ ಪ್ರಣಾಳಿಕೆ ಬಿಡುಗಡೆ ಮಾಡಿರುವ ಡಿ.ಎಂ.ಕೆ., ಮುಂದಿನ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ ಪ್ರತಿ ಮಹಿಳೆಗೆ 1,000 ರೂ. ನೀಡುವುದಾಗಿ ತಿಳಿಸಿದೆ.

ಸಂಸತ್ತು ಹಾಗೂ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಸ್ಥಾನ ಮೀಸಲಿಡಲಾಗುವುದು. ಶಿಕ್ಷಣ ಹಾಗೂ ಉದ್ಯೋಗದಲ್ಲೂ ಮಹಿಳೆಯರಿಗೆ ಶೇ.33ರ ಮೀಸಲಾತಿ ಕಲ್ಪಿಸಲಾಗುವುದು ಎಂದು ಹೇಳಿದೆ.

**ಐಎನ್‌ಡಿಐಎ ಪರವಾಗಿ ಡಿಎಂಕೆ ಪ್ರಣಾಳಿಕೆ**

ಐ.ಎನ್.ಡಿ.ಐ.ಎ. ಮೈತ್ರಿಕೂಟ ಅಧಿಕಾರಕ್ಕೆ ಬಂದಲ್ಲಿ ಏಕರೂಪದ ನಾಗರಿಕ ಸಂಹಿತೆ ಜಾರಿಗೆ ತರುವುದಿಲ್ಲ. ಸಿ.ಎ.ಎ. ತಡೆಯಲಾಗುವುದು. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನ ನೀಡುವ 370ನೇ ವಿಧಿ ಮತ್ತೆ ಜಾರಿಗೆ ತರಲಾಗುವುದು ಎಂದೂ ಪಕ್ಷ ಹೇಳಿದೆ.

ಮಹಿಳಾ ಸ್ವಸಹಾಯ ಸಂಘಟನೆಗಳಿಗೆ ಹತ್ತು ಲಕ್ಷ ರೂ.ಗಳವರೆಗೆ ಬಡ್ಡಿ ರಹಿತ ಸಾಲ, ಸ್ವಸಹಾಯ ಸಂಘಗಳಿಗೆ ಲಕ್ಷ ರೂ.ಗಳವರೆಗೆ ಬಡ್ಡಿ ರಹಿತ ವಾಹನ ಸಾಲ ನೀಡುವುದಾಗಿಯೂ ತಿಳಿಸಲಾಗಿದೆ. (4ನೇ ಪುಟಕ್ಕೆ)

33ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ನಲ್ಲೂರು ಗೌರಮ್ಮ ನರಹರಿಶೇಟ್ ರೇವಣಕರ್
ಜನನ : 11.11.1917 ನಿಧನ : 25.2.1991
ನೀವು ನಮ್ಮನ್ನಗಲಿ 33 ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ,
ಸದಾ ನಿಮ್ಮ ಸ್ಮರಣೆಯಲ್ಲಿರುವ
ನಲ್ಲೂರು ಅರುಣಾಚಲ ಎನ್. ರೇವಣಕರ್
ನಲ್ಲೂರು ಅರುಣ ಜ್ಯೂಯಲರ್ಸ್
ಮಂಡಿಪೇಟೆ, ದಾವಣಗೆರೆ.

ಚಿರಸ್ಮರಣೆ




ದಿ|| ಶ್ರೀ ಮಲ್ಲಿಕಾರ್ಜುನಯ್ಯ ಟಿ.ಎಂ.
K.E.B. ನಿಟ್ಟುವಳ್ಳಿ, ದಾವಣಗೆರೆ.
ಜನನ : 15.7.1953, ಮರಣ : 21.3.2001
ನೀವು ನಮ್ಮನ್ನಗಲಿ ಇಂದಿಗೆ 24 ವರ್ಷಗಳಾದವು... ನಿಮ್ಮ ನೆನಪುಗಳೇ ನಮಗೆ ದಾರಿದೀಪವಾಗಿವೆ. ಸದಾ ನಿಮ್ಮ ಸ್ಮರಣೆಯಲ್ಲಿ ಮುನ್ನಡೆಯುತ್ತಿರುವ...
ಪತ್ನಿ: ದ್ರಾಕ್ಷಾಯಣಮ್ಮ, ಹಿರಿಯ ಮಗ:ಜೀವರಾಜಯ್ಯ ಟಿ.ಎಂ., ಬೆಸ್ಕಾಂ
ಸೊಸೆ:ದೀಪಾ ಟಿ.ಎಂ., ಮಗಳು : ರಾಜೇಶ್ವರಿ ಟಿ.ಎಂ., ಅಳಿಯ : ಉಮೇಶ್,
ಕೆಎಸ್‌ಆರ್‌ಟಿಸಿ, ಕಿರಿಯ ಮಗ : ಶಾಂತಯ್ಯ ಟಿ.ಎಂ., ಸೊಸೆ : ಮೇಘಾ ಟಿ.ಎಂ.,
ಕಿರಿಯ ಮಗ : ಶಿವಯ್ಯ ಟಿ.ಎಂ., ಸೊಸೆ : ರಂಜಿತಾ ಟಿ.ಎಂ., ಮೊಮ್ಮಕ್ಕಳಾದ :
ಕಾರ್ತಿಕ್, ಕಾಂಚನ, ದುರ್ಗಾಶ್ರೀ, ಸೋಮಶೇಖರ್, ಸಿದ್ಧಾಂತ್, ತೇಜಸ್, ಅಮೃತಾ ಮತ್ತು ಕುಟುಂಬ ವರ್ಗ, ಲಿಂಗಾಯತರ ಕೋಟೆ, ನಿಟ್ಟುವಳ್ಳಿ, ದಾವಣಗೆರೆ.



# ಹೊನ್ನಾಳಿ : ನೀತಿ ಸಂಹಿತೆ ; ರೇಣುಕಾಚಾರ್ಯ ಜಯಂತಿ ಸರಳಾಚರಣೆಗೆ ನಿರ್ಧಾರ



ಹೊನ್ನಾಳಿ, ಮಾ. 20 - ಲೋಕಸಭಾ ಚುನಾವಣೆ ಪ್ರಯುಕ್ತ ಈಗಾಗಲೇ ಚುನಾವಣಾ ನೀತಿ ಸಂಹಿತೆ ಜಾರಿಯಾಗಿರುವ ಕಾರಣ ನಾಡಿದ್ದು ದಿನಾಂಕ 23ರ ಶನಿವಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮವನ್ನು ಸರಳ ಹಾಗೂ ಸಂಕ್ಷಿಪ್ತವಾಗಿ ಹಮ್ಮಿಕೊಳ್ಳಲಾಗಿದೆ ಎಂದು ಹೊನ್ನಾಳಿ ತಾಲ್ಲೂಕು ಬೇಡ ಜಂಗಮ ಸಂಘದ ಅಧ್ಯಕ್ಷ ಎಂ. ಪಂಚಾಕ್ಷರಯ್ಯ ಹೇಳಿದರು.

ಅವರು ಬುಧವಾರ ಪಟ್ಟಣದಲ್ಲಿ ಕರೆದಿದ್ದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದರು. ಈ ಬಾರಿಯ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮವನ್ನು ರಾಷ್ಟ್ರೀಯ ಹಬ್ಬಗಳ ಸಮಿತಿ ಹಾಗೂ ತಾಲ್ಲೂಕು ಬೇಡ ಜಂಗಮ ಸಂಘದ ವತಿಯಿಂದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಸರಳವಾಗಿ ಹಮ್ಮಿಕೊಳ್ಳಲಾಗಿದೆ ಎಂದರು.

ನೀತಿ ಸಂಹಿತೆ ಜಾರಿಯಾದ ಕಾರಣ ಸಮಾಜದ ಬಾಂಧವರು 8 ರಿಂದ 10 ಜನರು ಭಾಗವಹಿಸಲಿಕ್ಕೆ ಅವಕಾಶ ಇದ್ದು, ಸಮಾಜದ ಬಾಂಧವರು ಅನ್ಯಥಾ ಭಾವಿಸದೆ ಜಂಗಮರು ತಮ್ಮ ಮನೆಗಳಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಪೂಜಾ ಕೈಕಾರ್ಯಗಳನ್ನು ನಡೆಸಬೇಕು ಎಂದು ಅವರು ಮನವಿ ಮಾಡಿದರು.

ರೇಣುಕಾಚಾರ್ಯರ ಜಯಂತಿ ದಿನದಂದು ತಾಲ್ಲೂಕಿನ ಎಲ್ಲಾ ಶಾಲಾ, ಕಾಲೇಜುಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ರೇಣುಕಾಚಾರ್ಯರ ಭಾವಚಿತ್ರದ ಪೂಜೆಯೊಂದಿಗೆ ಆಚರಣೆ ಮಾಡಬೇಕೆಂದು ತಹಶೀಲ್ದಾರರಿಗೆ ಮನವಿ ಮಾಡಿದ ಪ್ರಯುಕ್ತ ತಹಶೀಲ್ದಾರ್ ಅವರು ಸರ್ಕಾರದ ಆದೇಶದಂತೆ ಎಲ್ಲಾ ಸರ್ಕಾರಿ ಸಂಸ್ಥೆಗಳಲ್ಲಿ ಶ್ರೀ ರೇಣುಕಾಚಾರ್ಯರ ಜಯಂತಿ ಆಚರಿಸಲು ಸುತ್ತೋಲೆ ಹೊರಡಿಸಿದ್ದಾರೆ ಎಂದರು.

**ಜಂಗಮರು ತಮ್ಮ - ತಮ್ಮ ಮನೆಗಳಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಪೂಜಾ ಕೈಕಾರ್ಯಗಳನ್ನು ನಡೆಸಬೇಕು.**

**-ಎಂ. ಪಂಚಾಕ್ಷರಯ್ಯ, ಅಧ್ಯಕ್ಷರು, ತಾಲ್ಲೂಕು ಬೇಡ ಜಂಗಮ ಸಂಘ, ಹೊನ್ನಾಳಿ**

ಸಮಾಜದ ಹಿರಿಯ ಮುಖಂಡ ಎಚ್.ಎಂ. ಗಂಗಾಧರಯ್ಯ, ಸಂಘದ ಪ್ರಧಾನ ಕಾರ್ಯದರ್ಶಿ ಕುಳಘಟ್ಟೆ ರುದ್ರಸ್ವಾಮಿ, ನಿರ್ದೇಶಕರಾದ ಬೆನಕನಹಳ್ಳಿ ಬಸವರಾಜಯ್ಯ, ಕ್ಯಾಸಿನಕೆರೆ ಜಗದೀಶಯ್ಯ, ಹೊಳೆಹರಳಹಳ್ಳಿ ಮಹಾಬಲಯ್ಯ, ಮಾಧ್ಯಮ ವಕ್ತಾರ ಎಂ.ಎಸ್. ಶಾಸ್ತ್ರೀ ಹೊಳೆಮಠ ಸುದ್ದಿ ಗೋಷ್ಠಿಯಲ್ಲಿದ್ದರು.

# ಹರಿಹರದಲ್ಲಿ ಕುಡಿಯುವ ನೀರಿಗಾಗಿ ಪರದಾಟ







**ಎಂ. ಚಿದಾನಂದ ಕಂಚಿಕೇರಿ**

ಹರಿಹರ, ಮಾ.20- ನಗರದಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಕುಡಿಯುವ ನೀರಿನ ಸರಬರಾಜು ಇಲ್ಲದೇ, ಸಾರ್ವಜನಿಕರು ನೀರಿಗಾಗಿ ಪರದಾಡುವಂತಾಗಿದೆ.

ಹೊಸಭರಂಪುರ ಬಡಾವಣೆ, ತಗ್ಗಿನಕೇರಿ, ದೊಡ್ಡಿಬೀದಿ, ಕೋಟೆ ಬಡಾವಣೆ, ಹಳ್ಳದಕೇರಿ, ಕೈಲಾಸ ನಗರ, ತುಂಗಭದ್ರಾ ಬಡಾವಣೆ, ಹೈಸ್ಕೂಲ್ ಬಡಾವಣೆ, ವಿದ್ಯಾನಗರ, ಇಂದ್ರಾ ನಗರ, ಕಾಳಿದಾಸ ನಗರ, ಬೆಂಕಿ ನಗರ, ರಾಜರಾಮ್ ಕಾಲೋನಿ, ವಾಗೀಶ್ ನಗರ, ಗಾಂಧಿ ನಗರ, ಹಳೇಹರ್ಲಾಪುರ, ವಿಜಯನಗರ ಬಡಾವಣೆ, ಎ.ಕೆ. ಕಾಲೋನಿ, ಗುತ್ತೂರು ಸೇರಿದಂತೆ ಹಲವಾರು ಬಡಾವಣೆಯಲ್ಲಿ ನೀರು ಸರಬರಾಜಾಗಿಲ್ಲ.

ನಗರದ ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಸಂಪೂರ್ಣವಾಗಿ ನಿಂತಿದೆ. ಕವಲೆತ್ತು ಬಳಿ ಇರುವ ಜಾಕ್‌ವೆಲ್ ಹತ್ತಿರ ನೀರಿನ ಹರಿವಿಲ್ಲದ ಕಾರಣ, ನಗರಕ್ಕೆ ನೀರು ಪೂರೈಕೆ ನಿಲ್ಲಿಸಲಾಗಿದೆ. ಬಹುತೇಕ ಎಲ್ಲ ಬಡಾವಣೆಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿದೆ.

ಮಳೆ ಕೊರತೆಯಿಂದಾಗಿ ಅಂತರ್ಜಲ ಕಡಿಮೆಯಾಗಿದೆ. ಇದರಿಂದ ನಗರಸಭೆ ಬೋರ್‌ವೆಲ್‌ಗಳ ಮೂಲಕವೂ ನೀರು ಸರಬರಾಜು ಮಾಡುವುದು ಕಷ್ಟಕರವಾಗಿದೆ.

ಹೊಸಭರಂಪುರ ಬಡಾವಣೆ ಸೇರಿದಂತೆ ಹಲವಾರು ಬಡಾವಣೆಗಳಲ್ಲಿ ಪೈಪ್‌ಲೈನ್‌ಗಳು ಒಡೆದಿವೆ. ಇವುಗಳ ದುರಸ್ತಿ ಆಗದೇ ಮನೆಗಳಿಗೆ ನೀರು ತಲುಪುತ್ತಿಲ್ಲ. ಸಾರ್ವಜನಿಕರಿಗೆ ಕುಡಿಯುವ ನೀರಿಗೆ ಆಗುತ್ತಿರುವ ಸಮಸ್ಯೆ ಬಗೆಹರಿಸಲು ನಗರಸಭೆ ಮತ್ತು ಜಲಸಿರಿ ನೀರು ಸರಬರಾಜು ಯೋಜನೆಗಳ ಅಧಿಕಾರಿಗಳು ಎಚ್ಚರ ವಹಿಸಬೇಕಿದೆ.

**ಟ್ಯಾಂಕರ್‌ಗೆ ಪ್ರಸ್ತಾವನೆ :** 24x7 ನೀರು ಸರಬರಾಜು ಯೋಜನೆ ಅಧಿಕಾರಿಗಳು ನೀರು ಶೇಖರಣಾ ಘಟಕ ಸ್ಥಾಪಿಸಿ, ನಂತರ ಉಳಿದ ಕಾಮಗಾರಿ ಆರಂಭಿಸಿದ್ದರೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುತ್ತಿರಲಿಲ್ಲ.

ಕಳೆದ ನಾಲ್ಕು ದಿನಗಳಿಂದ ನಗರಸಭೆ ವತಿಯಿಂದ ಮೂರು ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಪ್ರತಿ ವಾರ್ಡ್‌ಗೆ ಒಂದರಂತೆ ಬಾಡಿಗೆ ನೀರಿನ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೆಲವು ಕಡೆಗಳಲ್ಲಿ ಪೈಪ್ ಲೈನ್ ಹಾಳಾಗಿದ್ದು, ಅವುಗಳನ್ನು ಆದಷ್ಟು ಬೇಗನೇ ದುರಸ್ತಿ ಪಡಿಸಲಾಗುವುದು ಎಂದು ಪೌರಾಯುಕ್ತ ಐಗೂರು ಬಸವರಾಜ್ ಹೇಳಿದರು.

**ಶೇಖರಣಾ ಘಟಕ ಸ್ಥಾಪಿಸಿ :** ನಗರದ ಪಕ್ಕದಲ್ಲೇ ತುಂಗಭದ್ರಾ ನದಿ ಹರಿದರೂ, ಬೇಸಿಗೆಯಲ್ಲಿ ನೀರಿನ ಸಮಸ್ಯೆಯಾಗುತ್ತಿದೆ. ನಗರಸಭೆಯ ಎಲ್ಲಾ ಸದಸ್ಯರು, ಜಿಲ್ಲಾ ಮಂತ್ರಿಗಳು, ಸಂಸದರು, ಶಾಸಕರು ಸೇರಿದಂತೆ ಸರ್ಕಾರದ ಗಮನಕ್ಕೆ ಹಲವಾರು ಬಾರಿ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಒಂದು ಚಿಕ್ಕ ನೀರಿನ ಶೇಖರಣ ಘಟಕ ಸ್ಥಾಪಿಸಲು ಮುಂದಾಗದೇ ಇರುವುದು ದುರ್ದೈವ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಶಾಸಕ ಬಿ.ಪಿ. ಹರೀಶ್ ಸರ್ಕಾರದ ಮೇಲೆ ಒತ್ತಡ ಹಾಕಿ ನೀರಿನ ಶೇಖರಣೆ ಘಟಕ ಸ್ಥಾಪಿಸಲು ಮುಂದಾಗಬೇಕಿದೆ ಎಂದು ನಗರಸಭೆ ಸದಸ್ಯೆ ಆರ್.ಸಿ ಜಾವೇದ್ ಹೇಳಿದರು.

**ನದಿಯಲ್ಲಿ ಮರಳಿನ ಚೀಲ ಹಾಕಿ ನೀರು ತಡೆಯಲು ಕ್ರಮ :** ನದಿಯಲ್ಲಿ ಮರಳಿನ ಚೀಲವನ್ನು ಹಾಕಿ ನೀರು ತಡೆಯುವ ಕೆಲಸಕ್ಕೆ ಮುಂದಾಗಲಾಗಿದೆ. ಜೊತೆಗೆ ನದಿಯಲ್ಲಿ ನೀರು ಬಂದು ಜಾಕ್‌ವೆಲ್‌ಗೆ ನೀರು ಸಮರ್ಪಕವಾಗಿ ಹರಿಯುವಂತಾದರೆ ಕೂಡಲೇ ನಗರದ ಜನತೆಗೆ ನೀರು ಸರಬರಾಜು ಮಾಡಲಾಗುತ್ತದೆ ಎಂದು ಜಲಸಿರಿ ಇಲಾಖೆಯ ಅಧಿಕಾರಿ ನವೀನ್ ಕುಮಾರ್ ಹೇಳಿದರು.



# ಸದಾ ಹಣದ ಅಲಂಕಾರದ ದೇವತೆ ಗಾಣಗಟ್ಟೆ ಮಾಯಮ್ಮ ದೇವಿಯ ವಿಜೃಂಭಣೆಯ ರಥೋತ್ಸವ

ಕೊಟ್ಟೂರು, ಮಾ. 20 - ಸದಾ ಹಣದ ಅಲಂಕಾರದ ದೇವತೆ ಎಂದೇ ಪ್ರಸಿದ್ಧವಾದ ಕೊಟ್ಟೂರು ತಾಲ್ಲೂಕಿನ ಗಾಣಗಟ್ಟೆ ಮಾಯಮ್ಮ ದೇವಿಯ ರಥೋತ್ಸವ ಬುಧವಾರ ಸಂಜೆ ಸಾವಿರಾರು ಭಕ್ತರ ಪಾಲ್ಗೊಳ್ಳುವಿಕೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಆಂಧ್ರಪ್ರದೇಶ ಸೇರಿದಂತೆ ರಥೋತ್ಸವದ ಮುಂಚೆ ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ ಮತ್ತಿತರ ಕಡೆಯಿಂದ ಭಕ್ತರು ರಥೋತ್ಸವ ದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದರು. ಇದರೊಂದಿಗೆ ರಥೋತ್ಸವ ವೀಕ್ಷಣೆಗೆ ಹರಕೆ ಹೊತ್ತು ಕೆಲ ಭಕ್ತರು ಕೊಟ್ಟೂರು ಮತ್ತಿತರ ಕಡೆಗಳಿಂದ ಪಾದಯಾತ್ರೆ ಮೂಲಕ ಆಗಮಿಸಿದ್ದರು.

ವಾದ್ಯಗಳೊಂದಿಗೆ ರಥದ ಬಳಿ ಪಲ್ಲಕ್ಕಿ ಮೆರವಣಿಗೆಯೊಂದಿಗೆ ತಂದ ಪೂಜಾ ಬಳಗದವರು ರಥದ ಸುತ್ತಲೂ ಮೂರು ಸುತ್ತು ಪ್ರದಕ್ಷಿಣೆ ಹಾಕಿದ ನಂತರ ದೇವಿಯ ಪಟದ ಹರಾಜು ಪ್ರಕ್ರಿಯೆ ನಡೆಯಿತು. ದಾವಣಗೆರೆ ಮಹೇಶ ಅವರು ಮುಕ್ತಿ ಬಾವುಟ ಪಟಾಕ್ಷಿಯನ್ನು 301101 ರೂ.ಗಳಿಗೆ ಕೂಗಿ ಪಟಾಕ್ಷಿಯನ್ನು ಪಡೆಯುವಲ್ಲಿ ಯಶಸ್ವಿಯಾದರು.

ರಾಜ್ಯದ ಉಳಿದ ಎಲ್ಲಾ ದೇವರ ರಥಗಳನ್ನು ಭಕ್ತರು ಮಿಣಿ ಮೂಲಕ ಎಳೆದೊಯ್ದರೆ ಗಾಣಗಟ್ಟೆ ಮಾಯಮ್ಮ ದೇವಿಯ ರಥವನ್ನು ಯಾವುದೇ ಮಿಣಿ ಬಳಸದೆ ಭಕ್ತರು ತಳ್ಳುವ ಮೂಲಕ ರಥವನ್ನು ಎಳೆದೊಯ್ದರು. ರಥ ಪಾದಗಟ್ಟೆವರೆಗೆ ಮುಂದುವರೆದು ನಂತರ ಮೂಲ ಸ್ಥಾನಕ್ಕೆ ಬಂದು ತಲುಪಿತು. ರಥ ಸಾಗುತ್ತಿದ್ದಂತೆ ನೆರೆದಿದ್ದ ಸಾವಿರಾರು ಭಕ್ತರು ಬಾಳೆಹಣ್ಣು, ಉತ್ತುತ್ತಿ ಮತ್ತಿತರಗಳನ್ನು ಎಸೆದು ದೇವಿಗೆ ನಮಿಸಿದರು.



# ಪ್ರಥಮ ಚಿಕಿತ್ಸೆ ಅರಿವು ಎಲ್ಲರಿಗೂ ಅಗತ್ಯ

## ರೆಡ್ ಕ್ರಾಸ್ ಅರಿವು ಕಾರ್ಯಕ್ರಮದಲ್ಲಿ ಡಾ.ಕುಮಾರ್

ದಾವಣಗೆರೆ, ಮಾ. 18- ಭಾರತೀಯ ರೆಡ್ ಕ್ರಾಸ್ ಸಂಸ್ಥೆ ವತಿಯಿಂದ ಮಾನಸ ಪ್ಯಾರಾ ಮೆಡಿಕಲ್ ಕಾಲೇಜು, ರಾಜೀವ್ ಗಾಂಧಿ ಪ್ಯಾರಾ ಮೆಡಿಕಲ್ ಕಾಲೇಜು, ಬಿ. ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು, ಎಸ್. ಬಿ. ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ಇವರುಗಳ ಸಹಯೋಗದಲ್ಲಿ ಪ್ರಥಮ ಚಿಕಿತ್ಸಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಜರುಗಿದ ಈ ಕಾರ್ಯಕ್ರಮದಲ್ಲಿ ಪ್ರಸಿದ್ಧ ರಾಷ್ಟ್ರೀಯ ತರಬೇತುದಾರ ಡಾ. ಕುಮಾರ್ ವಿ. ಎಲ್. ಎಸ್. ಅವರು ತುರ್ತು ಸ್ಥಿತಿಗಳ ನಿರ್ವಹಣೆ ಮತ್ತು ಜೀವ ಉಳಿಸುವ ಪ್ರಥಮ ಚಿಕಿತ್ಸೆ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿ, ಪ್ರಥಮ ಚಿಕಿತ್ಸೆ ಅರಿವು ಎಲ್ಲರಿಗೂ ಅಗತ್ಯವಾಗಿದೆ ಎಂದು ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಸಭಾಪತಿ ಡಾ. ಎ. ಎಂ. ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಆನಂದ್ ಜ್ಯೋತಿ, ನಿರ್ದೇಶಕರಾದ ಕುಮಾರ ಎಂ, ಶಿವಾನಂದ್ ಡಿ.ಎನ್, ಶ್ರೀಕಾಂತ್ ಬಗರೆ, ರವಿಕುಮಾರ್ ಎ. ಜೆ, ಎನ್. ಕೆ. ಕೊಟ್ರೇಶ್, ಪನ್ನಾಲಾಲ್ ಬಿ, ಶಿವಕುಮಾರ ಎನ್. ಜಿ, ಕೆ. ಗಿರೀಶ್ ಇತರರು ಇದ್ದರು.

ಎಸ್. ಬಿ. ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ದಾವಣಗೆರೆ ಕಾಲೇಜಿನ ಪ್ರಾಂಶುಪಾಲ ಡಾ. ಷಣ್ಮುಖ ಕೆ, ಉಪನ್ಯಾಸಕ ಮಂಜುನಾಥ್ ಕೆ. ಎಂ., ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಪ್ರೊ. ಗುರು ಎಂ. ಸಿ, ಉಪನ್ಯಾಸಕ ಅಣ್ಣೇಶ್ ಪಿ, ಮಾನಸ ಪ್ಯಾರಾ ಮೆಡಿಕಲ್ ಕಾಲೇಜು ಪ್ರಾಂಶುಪಾಲರಾದ ಲಕ್ಷ್ಮೀ ಬಿ.ಎನ್, ಕಾಲೇಜಿನ ಸಂಯೋಜನಾಧಿಕಾರಿ ಮಹೇಶ್ ಎಂ. ಎನ್, ರಾಜೀವ್ ಗಾಂಧಿ ಪ್ಯಾರಾ ಮೆಡಿಕಲ್ ಕಾಲೇಜು ಸಂಯೋಜನಾಧಿಕಾರಿ ರಮೇಶ್ ಹೆಚ್ ಇತರರು ಉಪಸ್ಥಿತರಿದ್ದರು.

# ಹರಿಹರದಲ್ಲಿ ಪುನೀತ್ ಅಭಿಮಾನಿ ಬಳಗದಿಂದ ರಕ್ತದಾನ ಶಿಬಿರ



ಹರಿಹರ, ಮಾ.20- ತಾಲ್ಲೂಕಿನ ಹರಗನಹಳ್ಳಿ ಗ್ರಾಮದಲ್ಲಿ ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗದ ವತಿಯಿಂದ ಭಾನುವಾರ ದಿ. ಪುನೀತ್ ರಾಜ್‌ಕುಮಾರ್ ಅವರ ಜನ್ಮ ದಿನದ ಅಂಗವಾಗಿ ರಕ್ತದಾನ ಶಿಬಿರ ನಡೆಯಿತು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಬೆಳ್ಳೂಡಿಯ ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಐಸಿಟಿಸಿ ವಿಭಾಗದ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

ವೈದ್ಯಾಧಿಕಾರಿ ಡಾ.ಪಿ.ಕೆ. ಬಸವರಾಜ್, ಡಾ.ಬಿ.ಎಂ. ಸಂಜಯ್, ಎನ್.ಜಿ. ಶಿವಕುಮಾರ್, ಆರ್. ವಿನಾಯಕ, ಕೆ. ಜ್ಯೋತಿ ಗುಡ್ಡದ್, ಓ.ಎಸ್. ವಿನಯ್ ಕುಮಾರ್, ಕೊಟ್ರೇಶ್, ಅಶೋಕ್ ಕುಮಾರ್, ಚಂದ್ರು ಗೌಡ, ಸುನೀಲ್, ಸಂತೋಷ್, ಸಂದೀಪ್, ಅಂಗನವಾಡಿ ಕಾರ್ಯಕರ್ತೆ ಪ್ರಿಯಾಂಕ, ಆಶಾ ಕಾರ್ಯಕರ್ತೆ ಎನ್. ರೇಣುಕಾ ಹಾಗೂ ಗ್ರಾಮಸ್ಥರು ಇದ್ದರು.

# ಟೇಸ್ಟಿಂಗ್ ಪೌಡರ್ ನಿಷೇಧಿಸಲು ಆಗ್ರಹ



ದಾವಣಗೆರೆ, ಮಾ.20- ತರಗತಿಗಳಲ್ಲಿ ಶಿಕ್ಷಕರು ಮೊಬೈಲ್ ಬಳಸುತ್ತಿರುವುದು ಮತ್ತು ಆಹಾರ ಪದಾರ್ಥಗಳಲ್ಲಿ ಟೇಸ್ಟಿಂಗ್ ಪೌಡರ್ ಬಳಕೆ ನಿಷೇಧಿಸುವಂತೆ ಆಗ್ರಹಿಸಿ ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿಯು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು. ಇತ್ತೀಚಿನ ದಿನಗಳಲ್ಲಿ ಅಂಗಡಿಗಳ ಆಹಾರದಲ್ಲಿ ಹೆಚ್ಚಾಗಿ ಟೇಸ್ಟಿಂಗ್ ಪೌಡರ್ ಬಳಕೆ ಮಾಡುತ್ತಿದ್ದು, ಇಂತಹ ಆಹಾರ ತಿಂದವರು ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗೆ ತುತ್ತಾಗುವ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಈ ಕುರಿತು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಜಿಲ್ಲಾಧ್ಯಕ್ಷ ಟಿ.ಟಿ. ಸುಧೀಂದ್ರ ಕುಮಾರ್, ಮಹಿಳಾ ಅಧ್ಯಕ್ಷೆ ಪುಷ್ಪಾ, ವನಿತಾ, ಆಶಾ, ಪ್ರಶಾಂತ, ಮಂಜುನಾಥ್, ಅರುಣಕುಮಾರ್, ಮಂಜುಳ ಹಾಗೂ ಇತರರಿದ್ದರು


॥ ಶ್ರೀ ವೆಂಕಟೇಶ್ವರ ಪ್ರಸನ್ನ ॥

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಪೋತಲಗಟ್ಟೆ ಗ್ರಾಮದ ವಾಸಿ

**ಶ್ರೀ ಕಾಡಜ್ಜಿ ಶಿವಪ್ಪನವರು**

ಮಾಡುವ ವಿಜ್ಞಾಪನೆಗಳು.

ದಿನಾಂಕ 09-03-2024ನೇ ಶನಿವಾರ ರಾತ್ರಿ 8 ಗಂಟೆಗೆ ನನ್ನ ಸಹೋದರನಾದ

**ಶ್ರೀ ಕಾಡಜ್ಜಿ ಬಸವರಾಜಪ್ಪನವರು**

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ

**'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 21-03-2024ನೇ ಗುರುವಾರ ಬೆಳಿಗ್ಗೆ 10.30 ಗಂಟೆಗೆ ಹರಪನಹಳ್ಳಿ ತಾಲ್ಲೂಕು ಪೋತಲಗಟ್ಟೆ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.**

ಇಂತಿ ದುಃಖತಪ್ತರು : **ಮೃತರ ಧರ್ಮಪತ್ನಿ ಶ್ರೀಮತಿ ಬಸಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಕಾಡಜ್ಜಿ ವಂಶಸ್ಥರು, ಗ್ರಾಮಸ್ಥರು ಪೋತಲಗಟ್ಟೆ ಹಾಗೂ ಬಂಧು-ಮಿತ್ರರು. ಮೊ : 99458 40729**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ನಗರದಲ್ಲಿ ಇಂದು ಉಪನ್ಯಾಸ

ಬಾಪೂಜಿ ಮಕ್ಕಳ ಆಸ್ಪತ್ರೆ ಸಭಾಂಗಣದಲ್ಲಿ ಇಂದು ಮಧ್ಯಾಹ್ನ 3.30ರಿಂದ ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ 'ಎಲ್ಲೆಲ್ಲೂ ಜಾತ್ರೆಯ ಸಂಭ್ರಮಾಚರಣೆ, ಹೆಚ್ಚುತ್ತಿರುವ ಸಾಂಕ್ರಾಮಿಕ ಖಾಯಿಲೆಗಳ ಬಗ್ಗೆ ಅರಿವಿರಲಿ' ವಿಷಯವಾಗಿ ಜೆಜೆಎಂಎಂಸಿ ಸಮುದಾಯ ಆರೋಗ್ಯ ಮುಖ್ಯಸ್ಥರೂ, ಪ್ರಾಧ್ಯಾಪಕರೂ ಆದ ಡಾ.ಎಂ.ಎಸ್.ಅನುರೂಪ ಮಾತನಾಡುವರು.



# ಹೊನ್ನಾಳಿ ತಾ.ನಲ್ಲಿ ದಾಖಲೆಗಳಿಲ್ಲದ 17 ಮೊಬೈಲ್‌ಗಳು, 4 ಲಕ್ಷ ರೂ. ವಶ

ಹೊನ್ನಾಳಿ, ಮಾ. 20 - ತಾಲ್ಲೂಕಿನ ಹೊಳೆಹರಳಹಳ್ಳಿ ಕ್ರಾಸ್‌ನ ಚೆಕ್ ಪೋಸ್ಟ್ ಬಳಿ ಮಧ್ಯಾಹ್ನ ಎಸ್.ಎಸ್.ಟಿ. ತಂಡದವರು ಖಾಸಗಿ ಬಸ್ ತಪಾಸಣೆ ಮಾಡಿದ ಸಮಯದಲ್ಲಿ ಅಬ್ದುಲ್ ಖಲೀಲ್ ಎಂಬಾತನ ಬ್ಯಾಗಿನಲ್ಲಿ ಯಾವುದೇ ದಾಖಲೆಗಳಿಲ್ಲದ ಜಿಯೋ ಕಂಪೆನಿಯ 17 ಟಚ್ ಪ್ಯಾಡ್ ಮತ್ತು ಸ್ಯಾಮ್‌ಸಂಗ್ ಕಂಪನಿಯ ಗುರು ಮ್ಯೂಸಿಕ್ ಮಾಡೆಲ್‌ನ 4 ಮೊಬೈಲ್‌ಗಳು ಸೇರಿದಂತೆ ಒಟ್ಟು 17 ಮೊಬೈಲ್‌ಗಳನ್ನು ಮತ್ತು ನಂದಿ ಗುಡಿಯ ಪ್ರೌಢಶಾಲಾ ಶಿಕ್ಷಕ ಎಚ್.ಡಿ. ಗಡೆಕಟ್ಟೆ ಅವರ ದ್ವಿಚಕ್ರ ವಾಹನವನ್ನು ತಪಾಸಣೆ ಮಾಡಿದಾಗ ಯಾವುದೇ ದಾಖಲೆಗಳಿಲ್ಲದ 3,98,000 ರೂ. ಹಣವನ್ನು ವಶಕ್ಕೆ ಪಡೆದು ಖಜಾನಾಧಿಕಾರಿಗಳ ಸುಪರ್ದಿಗೆ ಒಪ್ಪಿಸಲಾಗಿದೆ ಎಂದು ಉಪವಿಭಾಗಾಧಿಕಾರಿ ಅಭಿಷೇಕ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ನ್ಯಾಮತಿ ತಹಶೀಲ್ದಾರ್ ಫಿರೋಜ್ ಷಾ ಸೋಮನಕಟ್ಟಿ, ಹೊನ್ನಾಳಿ ತಹಶೀಲ್ದಾರ್ ಪುರಂದರ ಹೆಗ್ಡೆ, ಫ್ಲೈಯಿಂಗ್ ಸ್ಕ್ವಾಡ್ ಕೃಷಿ ಅಧಿಕಾರಿ ಅತೀಕ್ ಉಲ್ಲಾ, ಎಸ್.ಎಸ್.ಟಿ. ತಂಡದ ಉಪನ್ಯಾಸಕ ಎಚ್. ದೊಡ್ಡಸ್ವಾಮಿ, ಎಚ್.ಎಲ್. ಬಸವರಾಜ್, ಪೊಲೀಸ್ ಸಿಬ್ಬಂದಿ ಎಚ್.ಎಲ್. ಉಮೇಶ್, ಗ್ರಾಮ ಆಡಳಿತಾಧಿಕಾರಿ ಭರ್ಮಪ್ಪ ಅಂಚಿನಮನೆ ಮತ್ತಿತರರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

# ಲೋಕಸಭಾ ಚುನಾವಣೆಯಲ್ಲಿ ರಾಣಿ ಚೆನ್ನಮ್ಮ ಪಾರ್ಟಿ ಸ್ಪರ್ಧೆ

ದಾವಣಗೆರೆ, ಮಾ.20- ಲೋಕಸಭಾ ಚುನಾವಣೆಯಲ್ಲಿ ರಾಣಿ ಚೆನ್ನಮ್ಮ ಪಾರ್ಟಿ ಅಭ್ಯರ್ಥಿ ದಾವಣಗೆರೆ ಕ್ಷೇತ್ರದಲ್ಲಿ ಸ್ಪರ್ಧಿಸುವುದು ಖಚಿತವಾಗಿದ್ದು, ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳಿಗೆ ಪ್ರಬಲ ಸ್ಪರ್ಧೆ ನೀಡಲಿದ್ದಾರೆ ಎಂದು ಪಕ್ಷದ ಸಂಸ್ಥಾಪಕ ಎಂ.ಬಿ. ದೇಸಾಯಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬ್ರಿಟಿಷರ ಆಧೀನದಲ್ಲಿದ್ದ ಭಾರತವನ್ನು ಸ್ವತಂತ್ರಗೊಳಿಸಲು ಹೋರಾಟ ನಡೆಸಿದವರಲ್ಲಿ ವೀರರಾಣಿ ಕಿತ್ತೂರ ಚೆನ್ನಮ್ಮ ಅಗ್ರಗಣ್ಯ ವೀರಮಹಿಳೆ. ಇಂತಹ ತಾಯಿಯ ಹೆಸರಿನಲ್ಲಿ ಸ್ಥಾಪಿತವಾದ ಜಾತ್ಯಾತೀತ ಪ್ರಾದೇಶಿಕ ರಾಜಕೀಯ ಪಕ್ಷವಾದ ರಾಣಿ ಚೆನ್ನಮ್ಮ ಪಾರ್ಟಿ ಈ ಚುನಾವಣೆಗೆ ಯೋಗ್ಯ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ ಎಂದಿದ್ದಾರೆ.

# ಮಲೇಬೆನ್ನೂರಿನಲ್ಲಿ ಬಾಡೂಟದ ಸಂಭ್ರಮ





ಮಲೇಬೆನ್ನೂರು, ಮಾ.20- ಪಟ್ಟಣದಲ್ಲಿ ಗ್ರಾಮದೇವತೆಗಳಾದ ಶ್ರೀ ಏಕನಾಥೇಶ್ವರಿ, ಕೋಡಿ ಮಾರೇಶ್ವರಿ ಮತ್ತು ಹಟ್ಟಿ ದುರ್ಗಾಂಬಿಕೆ ಅಮ್ಮನವರ ಜಾತ್ರಾ ಮಹೋತ್ಸವವು ಮಂಗಳವಾರ ಮತ್ತು ಬುಧವಾರ ಸಂಭ್ರಮದಿಂದ ಜರುಗಿತು.

ಮಂಗಳವಾರ ತಡರಾತ್ರಿಯಿಂದ ಆರಂಭವಾದ ಗ್ರಾಮದೇವತೆ ರಥದ ಮೆರವಣಿಗೆಯು ಬುಧವಾರ ಬೆಳಗಿನ ಜಾವ ಊರ ಹೊರಗಿನ ದೇವಸ್ಥಾನಕ್ಕೆ ವೈಭವದೊಂದಿಗೆ ಬಂದು ನೆಲೆಗೊಂಡಿತು.

ನಂತರ ಹಟ್ಟಿ ದುರ್ಗಾಂಬಿಕೆ ದೇವಸ್ಥಾನದಿಂದ ಘಟೆ ಬಂದ ನಂತರ, ಏಕನಾಥೇಶ್ವರಿ ಅಮ್ಮನವರ ಸಮ್ಮುಖದಲ್ಲಿ ಹಿಟ್ಟಿನ ಕೋಣನ ಬಲಿ ನೀಡಿ, ಅಮ್ಮನವರಿಗೆ ಪೂಜೆ, ಮಂಗಳಾರತಿ ಮಾಡಲಾಯಿತು. ಬುಧವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಭಕ್ತರು ಬೇವಿನ ಉಡುಗೆ, ಉರುಳು ಸೇವೆ, ಬಾಯಿ ಬೀಗ, ದೀಡು ನಮಸ್ಕಾರ ಸೇರಿದಂತೆ ಇತ್ಯಾದಿ ಸೇವೆ ಮತ್ತು ಹರಕೆಗಳನ್ನು ದೇವಿಗೆ ಅರ್ಪಿಸಿದರು. ಮಹಿಳೆಯರು ಸರದಿ ಸಾಲಿನಲ್ಲಿ ಬಂದು ಅಮ್ಮನವರಿಗೆ ಉಡಿ ತುಂಬಿ ಸಕಲ ಇಷ್ಟಾರ್ಥಗಳನ್ನು ಈಡೇರಿಸುವಂತೆ ಪ್ರಾರ್ಥಿಸಿದರು.

**ಬಾಡೂಟ :** ಬುಧವಾರ ಮಧ್ಯಾಹ್ನದಿಂದಲೇ ಪಟ್ಟಣದ ಮಾಂಸಹಾರಿ ಜನರ ಮನೆಗಳಲ್ಲಿ ಬಾಡೂಟದ ಸಂಭ್ರಮ ಜೋರಾಗಿತ್ತು. ಸಂಜೆ 7 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಪಟ್ಟಣ ಬಾಡೂಟಕ್ಕೆ ಬಂದಿದ್ದ ಬಂಧು-ಮಿತ್ರರಿಂದ ತುಂಬಿ ತುಳುಕಿತು. ಗುರುವಾರ ಕೂಡಾ ಬಾಡೂಟ ನಡೆಯಲಿದೆ. ಮೂಲಗಳ ಪ್ರಕಾರ ಸುಮಾರು 2 ಸಾವಿರಕ್ಕೂ ಹೆಚ್ಚು ಕುರಿಗಳನ್ನು ಹಬ್ಬಕ್ಕಾಗಿ ಪಟ್ಟಣದ ಜನತೆ ತಂದಿದ್ದರು ಎನ್ನಲಾಗಿದೆ.

**ನೀರಿನ ತೊಂದರೆ :** ಭದ್ರಾ ನಾಲೆಯಲ್ಲಿ ನೀರಿಲ್ಲದಿರುವುದು ಹಬ್ಬಕ್ಕೆ ತೊಂದರೆಯುಂಟಾಯಿತು. ಹಬ್ಬಗಳ ನಿಮಿತ್ತ್ಯ ರಸ್ತೆಗಳಿಗೆ ನೀರು ಹಾಕದ ಕಾರಣ ರಿಪೇರಿ ಆದ ರಸ್ತೆಗಳಲ್ಲಿ ಧೂಳು ಕೂಡಾ ಹೆಚ್ಚಾಗಿತ್ತು.

**ಹುಲುಸು :** ಗ್ರಾಮದೇವತೆ ಹಬ್ಬದ ಅಂಗವಾಗಿ ಶುಕ್ರವಾರ ಬೆಳಿಗ್ಗೆ 8.45 ರಿಂದ 9.30 ರವರೆಗೆ ಪಟ್ಟಣದಲ್ಲಿ ಹುಲುಸು ಹೊಡೆಯುವ ಕಾರ್ಯಕ್ರಮ ಜರುಗಲಿದೆ.

# ಪಾಕ್ : ಗ್ವಾಡರ್ ಮೇಲೆ ದಾಳಿ, ಏಳು ಉಗ್ರರು ಹತ

ಕರಾಚಿ, ಮಾ. 20 – ಶಸ್ತ್ರಸಜ್ಜಿತ ಬಲೂಚ್ ಉಗ್ರರು ಪಾಕಿಸ್ತಾನದ ಗ್ವಾಡರ್ ಬಂದರು ಪ್ರಾಧಿಕಾರ ಸಂಕೀರ್ಣದಲ್ಲಿ ನುಗ್ಗಿ ಗುಂಡಿನ ದಾಳಿ ನಡೆಸಿದ್ದಾರೆ. ಈ ಪ್ರದೇಶದಲ್ಲಿ ಹಲವು ಸ್ಫೋಟಗಳು ಸಂಭವಿಸಿವೆ. ದಾಳಿ ನಡೆಸಿದ ಏಳು ಉಗ್ರರನ್ನು ಹೊಡೆದುರುಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಬಲೂಚಿಸ್ತಾನ ಲಿಬರೇಷನ್ ಆರ್ಮಿ ದಾಳಿಯ ಹೊಣೆ ಹೊತ್ತುಕೊಂಡಿದೆ.

## ಸಂಕ್ಷಿಪ್ತ ಸುದ್ದಿ

**☞ ನೀಟ್ ಪಿ.ಜಿ. ಪರೀಕ್ಷೆ ಜೂನ್ 23ಕ್ಕೆ ನಿಗದಿ**
ನವದೆಹಲಿ : ನೀಟ್ ಪಿ.ಜಿ. ಪರೀಕ್ಷೆಯನ್ನು ಜೂನ್ 23ರಂದು ನಡೆಸುವುದಾಗಿ ರಾಷ್ಟ್ರೀಯ ವೈದ್ಯಕೀಯ ಆಯೋಗ ತಿಳಿಸಿದೆ. ಈ ಹಿಂದೆ ಪರೀಕ್ಷೆಯನ್ನು ಜುಲೈ 7ರಂದು ನಡೆಸಲು ಉದ್ದೇಶಿಸಲಾಗಿತ್ತು. ಜುಲೈ 15ರಂದು ಫಲಿತಾಂಶ ಪ್ರಕಟಿಸಲಾಗುವುದು. ಆಗಸ್ಟ್ 5ರಿಂದ ಅಕ್ಟೋಬರ್ 15ರ ನಡುವೆ ಪ್ರವೇಶ ಪ್ರಕ್ರಿಯೆ ನಡೆಯಲಿದೆ.

**☞ ಸತ್ಯ ಪರಿಶೀಲನಾ ಘಟಕಕ್ಕೆ ಅಧಿಸೂಚನೆ**
ನವದೆಹಲಿ : ಪ್ರೆಸ್ ಇನ್ಫಾರ್ಮೇಷನ್ ಬ್ಯೂರೋ ಅಡಿಯಲ್ಲಿ ಕಾರ್ಯನಿರ್ವಹಿಸುವ ಸತ್ಯ ಪರಿಶೀಲನಾ ಘಟಕಕ್ಕೆ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಇದು ಸರ್ಕಾರಕ್ಕೆ ಸಂಬಂಧಿಸಿದಂತೆ ಆನ್‌ಲೈನ್‌ನಲ್ಲಿರುವ ಮಾಹಿತಿಗಳನ್ನು ಪರಿಶೀಲಿಸಲಿದೆ. ಈ ಘಟಕವು ಎಲ್ಲಾ ಫೇಕ್ ನ್ಯೂಸ್ ಹಾಗೂ ಅಪಪ್ರಚಾರದ ಬಗ್ಗೆ ಪರಿಶೀಲಿಸಲಿದೆ. ಈ ರೀತಿಯ ಘಟಕ ಸ್ಥಾಪನೆ ಪ್ರಶ್ನಿಸಿ ದಾಖಲಿಸಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ತಳ್ಳಿ ಹಾಕಿತ್ತು. ನಂತರ ಸರ್ಕಾರ ಅಧಿಸೂಚನೆ ಹೊರಡಿಸಿದೆ.

**☞ ಅನಧಿಕೃತ ಜಾಹೀರಾತುಗಳ ತೆರವಿಗೆ ಚುನಾವಣಾ ಆಯೋಗದ ಗಡುವು**
ನವದೆಹಲಿ : ರಾಜಕೀಯ ಪಕ್ಷಗಳ ಅನಧಿಕೃತ ಜಾಹೀರಾತುಗಳನ್ನು 24 ಗಂಟೆಗಳಲ್ಲಿ ತೆರವುಗೊಳಿಸಬೇಕು ಈ ಬಗ್ಗೆ 24 ಗಂಟೆಗಳ ಒಳಗೆ ವರದಿ ಸಲ್ಲಿಸಬೇಕು ಎಂದು ರಾಜ್ಯ ಸರ್ಕಾರಗಳಿಗೆ ಚುನಾವಣಾ ಆಯೋಗ ತಿಳಿಸಿದೆ. ಸರ್ಕಾರ, ಸಾರ್ವಜನಿಕ ಹಾಗೂ ಖಾಸಗಿ ಸೇರಿದಂತೆ ಎಲ್ಲೇ ಅನಧಿಕೃತ ಜಾಹೀರಾತುಗಳಿದ್ದರೂ ತೆರವುಗೊಳಿಸಬೇಕು ಎಂದು ತಿಳಿಸಲಾಗಿದೆ.

**☞ ಗೋಮೂತ್ರ ರಾಜ್ಯಗಳು ಎಂದಿದ್ದ ಸೆಂತಿಲ್ ಕುಮಾರ್‌ಗೆ ಟಿಕೆಟ್ ಇಲ್ಲ**
ಚೆನ್ನೈ : ಉತ್ತರದ ರಾಜ್ಯಗಳನ್ನು ಗೋಮೂತ್ರ ರಾಜ್ಯಗಳು ಎಂದು ಸಂಸತ್ತಿನಲ್ಲಿ ಟಿಪ್ಪಣಿ ಮಾಡಿದ್ದ ಡಿ.ಎಂ.ಕೆ.ಯ ಧರ್ಮಪುರಿ ಸಂಸದ ಎಸ್. ಸೆಂತಿಲ್ ಕುಮಾರ್ ಅವರಿಗೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ನಿರಾಕರಿಸಲಾಗಿದೆ.

**☞ ಜಿ.ಎಸ್.ಟಿ. ಹಗರಣ : ಇಬ್ಬರು ವ್ಯಾಪಾರಿಗಳ ಬಂಧನ**
ನೋಯ್ಡಾ : ಜಿ.ಎಸ್.ಟಿ. ಹಗರಣ ನಡೆಸಿ ಸರ್ಕಾರಕ್ಕೆ 25 ಕೋಟಿ ರೂ. ನಷ್ಟ ಮಾಡಿದ ಇಬ್ಬರು ಕೋಟ್ಯಾಧೀಶರನ್ನು ಬಂಧಿಸಿರುವುದಾಗಿ ಉತ್ತರ ಪ್ರದೇಶದ ನೋಯ್ಡಾದ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ. ಈ ಇಬ್ಬರು ಬಂಧಿತ ವ್ಯಾಪಾರಿಗಳು ಹರಿಯಾಣಕ್ಕೆ ಸೇರಿದವರಾಗಿದ್ದಾರೆ. ಫೋರ್ಜರಿ ದಾಖಲೆ ಮೂಲಕ ಹಲವಾರು ನಕಲಿ ಕಂಪನಿಗಳನ್ನು ಸೃಷ್ಟಿಸಿ ಸರ್ಕಾರಕ್ಕೆ ವಂಚನೆ ಮಾಡಲಾಗಿತ್ತು.

**☞ ಐಸಿಸ್ ಇಂಡಿಯಾ ಉಗ್ರ ಸಂಘಟನೆ ಮುಖ್ಯಸ್ಥನ ಬಂಧನ**
ಗುವಾಹತಿ : ಐಸಿಸ್ ಇಂಡಿಯಾ ಉಗ್ರವಾದಿ ಸಂಘಟನೆಯ ಮುಖ್ಯಸ್ಥ ಹಾಗೂ ಆತನ ಸಹಚರನನ್ನು ಅಸ್ಸಾಂನ ಧುಬ್ರಿ ಜಿಲ್ಲೆಯಲ್ಲಿ ಬುಧವಾರ ಬಂಧಿಸಲಾಗಿದೆ. ಈ ಇಬ್ಬರು ಬಾಂಗ್ಲಾದೇಶದಿಂದ ಬಂದಾಗ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

**☞ ಡ್ಯಾನಿಶ್ ಅಲಿ ಕಾಂಗ್ರೆಸ್‌ಗೆ ಸೇರ್ಪಡೆ**
ನವದೆಹಲಿ : ಬಿ.ಎಸ್.ಪಿ.ಯಿಂದ ಅಮಾನತ್ತುಗೊಂಡಿದ್ದ ಲೋಕಸಭಾ ಸದಸ್ಯ ಡ್ಯಾನಿಶ್ ಅಲಿ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರ ಸಮ್ಮುಖದಲ್ಲಿ ಅವರು ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

**☞ ಆಯುಕ್ತರ ಆಯ್ಕೆ ಸಮಿತಿಯಿಂದ ಸಿಜೆಐ ಕೈ ಬಿಟ್ಟಿದ್ದಕ್ಕೆ ಸಮರ್ಥನೆ**
ನವದೆಹಲಿ : ಚುನಾವಣಾ ಆಯುಕ್ತರ ಆಯ್ಕೆ ಸಮಿತಿಯಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯನ್ನು ಹೊರಗಿಟ್ಟಿರುವುದನ್ನು ಕೇಂದ್ರ ಸರ್ಕಾರ ಸಮರ್ಥಿಸಿಕೊಂಡಿದೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಎದುರು ವಾದ ಮಂಡಿಸಿರುವ ಕೇಂದ್ರ ಸರ್ಕಾರ, ನ್ಯಾಯಿಕ ಸದಸ್ಯರು ಸಮಿತಿಯಲ್ಲಿ ಇರುವ ಕಾರಣದಿಂದ ಆಯೋಗಕ್ಕೆ ಸ್ವಾತಂತ್ರ್ಯ ಸಿಗುತ್ತದೆ ಎಂದು ಹೇಳಲಾಗದು ಎಂದು ತಿಳಿಸಿದೆ.

**☞ ಕೃಷ್ಣ ಕೂಪದಲ್ಲಿ ಪೂಜೆಗೆ ಅನುಮತಿ ನೀಡುವುದಕ್ಕೆ ಆಕ್ಷೇಪ**
ಪ್ರಯಾಗ್‌ರಾಜ್ : ಮಥುರಾದ ಶಾಹಿ ಈದ್ಗಾ ದರ್ಗಾದಲ್ಲಿರುವ ಕೃಷ್ಣ ಕೂಪದಲ್ಲಿ ಪೂಜೆ ಸಲ್ಲಿಸಲು ಅನುಮತಿ ನೀಡಬೇಕು ಎಂಬ ಅರ್ಜಿಯನ್ನು ಮುಸ್ಲಿಂ ಕಕ್ಷಿದಾರರು ವಿರೋಧಿಸಿದ್ದಾರೆ. ಹಿಂದೂ ಕಕ್ಷಿದಾರರ ಅರ್ಜಿಯು ವಿಚಾರಣೆಗೆ ಸ್ವೀಕಾರಾರ್ಹವೇ ಎಂಬುದು ಇತ್ಯರ್ಥವಾಗುವವರೆಗೂ ಯಾವುದೇ ಆದೇಶ ಹೊರಡಿಸಬಾರದು ಎಂದು ಅಲಹಾಬಾದ್ ಹೈಕೋರ್ಟ್‌ನಲ್ಲಿ ಮನವಿ ದಾಖಲಿಸಲಾಗಿದೆ.

# ನಾಳೆ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ

## ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವ, ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ ಪ್ರದಾನ ಸಮಾರಂಭ



ಬಾಳೆಹೊನ್ನೂರು, ಮಾ. 20 - ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದಲ್ಲಿ ಇಂದಿನಿಂದ ಇದೇ ದಿನಾಂಕ 26ರ ವರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಜಾತ್ರಾ ಮಹೋತ್ಸವ ಜರುಗಲಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಾಳೆ ದಿನಾಂಕ 21ರಂದು ಸಂಜೆ ಸಾವಯವ ಕೃಷಿ-ಒಂದು ಚಿಂತನ ಗೋಷ್ಠಿಯನ್ನು ಮಾಜಿ ಮುಖ್ಯ ಮಂತ್ರಿ ಜಗದೀಶ್ ಶೆಟ್ಟರ್ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕ ಜಗದೀಶ ಗುಡಗುಂಟಿ, ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಮಾಜಿ ಶಾಸಕ ಕೆ.ಎಸ್. ಲಿಂಗೇಶ್, ರೈತ ಮುಖಂಡ ಹೆಚ್.ಆರ್. ಬಸವರಾಜ್, ನಂದಗೋಕುಲದ ಆನಂದ ಆಷೀಷರ್, ಶಿವಮೊಗ್ಗದ ಎಸ್.ಎಸ್.ಜ್ಯೋತಿ ಪ್ರಕಾಶ್, ಎನ್.ಜೆ. ರಾಜಶೇಖರ ಭಾಗವಹಿಸುವರು. ಬಂಕಾಪುರ ರೇವಣಸಿದ್ಧೇಶ್ವರ ಶ್ರೀಗಳು, ಹುಕ್ಕೇರಿ ಚಂದ್ರಶೇಖರ ಶ್ರೀಗಳು, ನೆಗಳೂರು ಗುರುಶಾಂತೇಶ್ವರ ಶ್ರೀಗಳು ಪಾಲ್ಗೊಳ್ಳುವರು.

ನಾಡಿದ್ದು ದಿನಾಂಕ 22ರಂದು ಬೆಳಿಗ್ಗೆ 11.30ಕ್ಕೆ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ-ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವ ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸುವರು. ಬಾಗಲಕೋಟೆಯ ಡಾ|| ಮಹಾಜಬೀನ ಎಸ್. ಮಧುರಕರ ಇವರಿಗೆ 2024ನೇ ಸಾಲಿನ 'ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ' ಪ್ರದಾನ ಮಾಡಲಾಗುವುದು. ಮುಖ್ಯ ಅತಿಥಿಗಳಾಗಿ ಸಚಿವ ಕೆ.ಜೆ. ಜಾರ್ಜ್, ಈಶ್ವರ ಖಂಡ್ರೆ, ಲಕ್ಷ್ಮಿ ಹೆಬ್ಬಾಳಕರ, ಎನ್.ಎಸ್. ಬೋಸರಾಜ್, ಡಾ|| ಶರಣ ಪ್ರಕಾಶ ಪಾಟೀಲ, ಸಂಸದ ಬಿ.ವೈ. ರಾಘವೇಂದ್ರ, ಶಾಸಕ ಟಿ.ಡಿ. ರಾಜೇಗೌಡರು, ಎ.ಬಿ. ಸುದರ್ಶನ್, ಹೆಚ್. ಬಿ. ರಾಜಗೋಪಾಲ, ಸುಧೀರ ಕುಮಾರ್ ಮುರೋಳಿ ಭಾಗವಹಿಸುವರು. ಎಮ್ಮಿಗನೂರು ವಾಮದೇವ ಮಹಂತ ಶ್ರೀಗಳು, ಅಮ್ಮಿನಭಾವಿ ಅಭಿನವ ಶಾಂತಲಿಂಗ ಶ್ರೀಗಳು, ಸಿದ್ಧರಬೆಟ್ಟದ ವೀರಭದ್ರ ಶ್ರೀಗಳು, ಗೌರಿಗದ್ದೆ ಅವಧೂತ ಆಶ್ರಮದ ವಿನಯ ಗುರೂಜಿ ಉಪಸ್ಥಿತರಿರುವರು.

ದಿನಾಂಕ 23ರಂದು ಸಂಜೆ ಯುವ ಜನಾಂಗದಲ್ಲಿ ಧರ್ಮ ಪ್ರಜ್ಞೆ-ರಾಷ್ಟ್ರ ಪ್ರಜ್ಞೆ ಸಮಾರಂಭವನ್ನು ಮಾಜಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಸಂಸದ ಪ್ರಜ್ವಲ್ ರೇವಣ್ಣ, ಮಾಜಿ ಸಚಿವ ಸಿ.ಸಿ. ಪಾಟೀಲ, ಶಾಸಕ ಹೆಚ್.ಕೆ. ಸುರೇಶ್, ಮಾಜಿ ಸಚಿವ ಸಿ.ಟಿ. ರವಿ, ಡಿ.ಎನ್. ಜೀವರಾಜ್, ಮಾಜಿ ಶಾಸಕ ಬೆಳ್ಳಿ ಪ್ರಕಾಶ, ಡಿ.ಎಸ್. ಸುರೇಶ ಆಗಮಿಸುವರು. ಸೂಡಿ ಡಾ|| ಕೊಟ್ಟೂರು ಬಸವೇಶ್ವರ ಶ್ರೀಗಳು, ಹರಪನಹಳ್ಳಿ ವರಸದ್ಯೋಜಾತ ಶ್ರೀಗಳು ಪಾಲ್ಗೊಳ್ಳುವರು.

ದಿನಾಂಕ 24ರಂದು ಸಂಜೆ ಜಾನಪದ ಹಬ್ಬವನ್ನು ಜಾನಪದ ತಜ್ಞ ಡಾ. ರಾಮು ಮೂಲಗಿ ಉದ್ಘಾಟಿಸಲಿದ್ದು ಶಾಸಕರಾದ ಹೆಚ್.ಡಿ. ತಮ್ಮಯ್ಯ, ಡಿ.ಹೆಚ್. ಶ್ರೀನಿವಾಸ, ಮಾಜಿ ವಿ.ಪ. ಸದಸ್ಯರಾದ ಗಾಯತ್ರಿ ಶಾಂತೇಗೌಡರು, ಲಿಂಗಸುಗೂರು ಮಾತಾ ನಂದಿಕೇಶ್ವರಿ ಅಮ್ಮನವರು, ರೋಟರಿ ಸಂಸ್ಥೆ ಗವರ್ನರ್ ಕು.ಬಿ.ಸಿ. ಗೀತಾ, ಬೆಂಗಳೂರಿನ ಬೀರೂರು ಶಿವಸ್ವಾಮಿ ಮುಖ್ಯ ಅತಿಥಿಗಳಾಗಿರುವರು. ಮುಕ್ತಿಮಂದಿರದ ವಿಮಲ ರೇಣುಕ ಮುಕ್ತಿಮುನಿ ಶ್ರೀಗಳು, ಶಿರಕೋಳ ಗುರುಸಿದ್ದೇಶ್ವರ ಶ್ರೀಗಳು ಪಾಲ್ಗೊಳ್ಳುವರು.

ದಿನಾಂಕ 25ರಂದು ಸಂಜೆ ನೈತಿಕ ಮೌಲ್ಯಗಳ ಸಂರಕ್ಷಣೆ ಸಮಾರಂಭವನ್ನು ಮೈಸೂರು ಡಾ|| ಮುಮ್ಮಡಿ ಚಂದ್ರಶೇಖರ ಶ್ರೀಗಳು ಉದ್ಘಾಟಿಸುವರು. ಕವಲೇದುರ್ಗ ಮರುಳಸಿದ್ಧ ಶ್ರೀಗಳು, ಬೀರೂರು ರುದ್ರಮುನಿ ಶ್ರೀಗಳು, ಚಿಕ್ಕಮಗಳೂರು ಚಂದ್ರಶೇಖರ ಶ್ರೀಗಳು, ರಾಯಚೂರು ಶಾಂತಮಲ್ಲ ಶ್ರೀಗಳು, ಶ್ರೀನಿವಾಸ ಸರಡಗಿ ರೇವಣಸಿದ್ಧೇಶ್ವರ ಶ್ರೀಗಳು, ರಾಯಚೂರು ಅಭಿನವ ರಾಚೋಟೇಶ್ವರ ಶ್ರೀಗಳು ಉಪಸ್ಥಿತರಿರುವರು.

ದಿನಾಂಕ 26ರಂದು ಭದ್ರಾ ನದಿ ತೀರದಲ್ಲಿ ಸುರಗಿ ಸಮಾರಾಧನೆಯೊಂದಿಗೆ ಸಮಾರಂಭ ಮಂಗಲಗೊಳ್ಳುವು ದಾಗಿ ಶ್ರೀ ರಂಭಾಪುರಿ ಜಗದ್ಗುರುಗಳು ವಿವರಿಸಿದ್ದಾರೆ.

# ರಾಜ್ಯದ 28 ಕ್ಷೇತ್ರದಲ್ಲೂ ಆರ್‌ಪಿಐಬಿ ಸ್ಪರ್ಧೆ

ದಾವಣಗೆರೆ, ಮಾ.20- ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ(ಬಿ) (ಆರ್‌ಪಿಐಬಿ) ಪಕ್ಷವು ದೇಶದ ಹಲವು ರಾಜ್ಯದಲ್ಲಿ ಸ್ಪರ್ಧಿಸುವ ಜತೆಗೆ ರಾಜ್ಯದ 28 ಕ್ಷೇತ್ರಗಳಲ್ಲೂ ಸ್ಪರ್ಧಿಸಲಿದೆ ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಡಾ. ಎನ್. ಮೂರ್ತಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಚುನಾವಣಾ ತಯಾರಿ ನಡೆಸಿರುವ ಪಕ್ಷವು, ಕೆಲವೇ ದಿನಗಳಲ್ಲಿ ಆಕಾಂಕ್ಷಿಗಳ ಪಟ್ಟಿ ಬಿಡುಗಡೆ ಮಾಡಲಿದೆ ಎಂದು ಹೇಳಿದರು.

**ಬೆಂಗಳೂರಿನ ವಸಂತ ನಗರದ ಅಂಬೇಡ್ಕರ್ ಭವನದಲ್ಲಿ ಏಪ್ರಿಲ್ 15ರಂದು ದ.ಸಂ. ಸಮಿತಿಯ 50ನೇ ಸುವರ್ಣ ಮಹೋತ್ಸವದ ಐತಿಹಾಸಿಕ ಸಮಾವೇಶ ನಡೆಯಲಿದೆ. ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಮ್ ಅವರ ಜಯಂತ್ಯುತ್ಸವದ ಅಂಗವಾಗಿ ರಾಷ್ಟ್ರೀಯ ವಿಚಾರ ಸಂಕಿರಣ ಏರ್ಪಡಿಸಲಾಗಿದೆ.**

ರಾಜ್ಯದ 28 ಕ್ಷೇತ್ರದಲ್ಲೂ 'ಭೀಮಜಾಥಾ' ತಂಡ ಪ್ರವಾಸದ ಜತೆಗೆ ಸಂವಿಧಾನ ಜಾರಿ ಜನಾಂದೋಲನ ಮಾಡುತ್ತಿದೆ. ಮಾ.18ರಿಂದಲೇ ಪ್ರವಾಸ ಪ್ರಾರಂಭವಾಗಿದ್ದು, ಮಾ.21 ರಂದು ಗದಗ, 22ಕ್ಕೆ ಕೊಪ್ಪಳ, 23ಕ್ಕೆ ಬಾಗಲಕೋಟೆ, 24ಕ್ಕೆ ಬಿಜಾಪುರ, 25ಕ್ಕೆ ಕಲಬುರ್ಗಿ, 26ಕ್ಕೆ ಯಾದಗಿರಿ, 27ಕ್ಕೆ ರಾಯಚೂರು, 28ಕ್ಕೆ ಬಳ್ಳಾರಿ, 29ಕ್ಕೆ ಬೆಳಗಾವಿ ಮತ್ತು ಏಪ್ರಿಲ್ 1ರಂದು ಮೈಸೂರಿನಲ್ಲಿ ನಡೆಯಲಿದೆ ಎಂದು ಮಾಹಿತಿ ನೀಡಿದರು. ದೇಶದಲ್ಲಿ ದೀರ್ಘಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಮತ್ತು ಬಿಜೆಪಿ, ಸಂವಿಧಾನದ ಆಶಯ ಜಾರಿ ಮಾಡದೇ ಎರಡು ಪಕ್ಷದ ಆಡಳಿತದಲ್ಲೂ ಕೋಮುವಾದ, ತೀವ್ರ ಭ್ರಷ್ಟಾಚಾರ ಹಾಗೂ ಭಯೋತ್ಪಾದನೆಯಿಂದ ದೇಶ ಬೆಂದಿದೆ ಎಂದು ದೂರಿದರು.

ಎಸ್ಸಿ-ಎಸ್ಟಿ ಸೇರಿದ 11,144 ಕೋಟಿ ಹಣ ಪಂಚ ಗ್ಯಾರಂಟಿಗಳಿಗೆ ವ್ಯಯಿಸಿ ಪರಿಶಿಷ್ಟರ ಹಣ ದುಂದು ವೆಚ್ಚವಾಗುತ್ತಿದೆ ಮತ್ತು 2023-24ರ ಸಾಲಿನ ಪರಿಶಿಷ್ಟ ವಿದ್ಯಾರ್ಥಿಗಳ, ವಿದ್ಯಾರ್ಥಿ ವೇತನದ 8ಸಾವಿರ ಅರ್ಜಿಗಳನ್ನು ವಜಾಗೊಳಿಸಿದೆ ಎಂದು ಹೇಳಿದರು.

ಪ.ಜಾ ಮತ್ತು ಪ.ವರ್ಗದ ಹಣವನ್ನು 36 ಇಲಾಖೆಗಳಿಗೆ ಹಂಚಿ ಹಣ ಲೂಟಿ ಮಾಡಿದ್ದಾರೆ ಎಂದು ಆರೋಪಿಸಿದ ಅವರು, ಪರಿಶಿಷ್ಟರ ಹಣ ಬಳಕೆ ಬಗ್ಗೆ ಶ್ವೇತ ಪತ್ರ ಹೊರಡಿಸಿ ಲೋಕಸಭಾ ಚುನಾವಣೆಗೆ ಬರಲಿ ಎಂದು ಸವಾಲು ಹಾಕಿದರು.

ಜಿಲ್ಲಾಧ್ಯಕ್ಷ ಎಚ್. ಮಂಜುನಾಥ್, ಸಂಘಟನಾ ಕಾರ್ಯದರ್ಶಿ ಚೌಡಪ್ಪ ಸುದ್ದಿಗೋಷ್ಠಿಯಲ್ಲಿದ್ದರು.

## ಹೊನ್ನಾಳಿ ಹಿರೇಕಲ್ಮಠದಲ್ಲಿ ಇಂದು ಸಾಮೂಹಿಕ ವಿವಾಹ-ಪ್ರಶಸ್ತಿ ಪ್ರದಾನ

ಹೊನ್ನಾಳಿ ಹಿರೇಕಲ್ಮಠದ ಲಿಂ.ಮೃತ್ಯುಂಜಯ ಶಿವಾಚಾರ್ಯ ಸ್ವಾಮೀಜಿ ಅವರ 54ನೇ ವಾರ್ಷಿಕ ಪುಣ್ಯಾರಾಧನೆ ಮತ್ತು ಲಿಂ.ಒಡೆಯರ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರ 9ನೇ ವಾರ್ಷಿಕ ಸಂಸ್ಮರಣೆ ಕಾರ್ಯಕ್ರಮಗಳ ಪ್ರಯುಕ್ತ ಹಿರೇಕಲ್ಮಠದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಸಾಮೂಹಿಕ ವಿವಾಹ ಮತ್ತು 'ಚಂದ್ರಶೇಖರ ಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿವೆ.

ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಸಾನಿಧ್ಯ ವಹಿಸಲಿದ್ದು. ಮುಷ್ಟೂರು ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಅಧ್ಯಕ್ಷತೆ ವಹಿಸುವರು. ಸಂಸದ ಜಿ.ಎಂ.ಸಿದ್ದೇಶ್ವರ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಶಾಸಕ ಡಿ.ಜಿ.ಶಾಂತನಗೌಡ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಮತ್ತಿತರರು ಭಾಗವಹಿಸುವರು. ಈ ಬಾರಿಯ 'ಚಂದ್ರಶೇಖರ ಶ್ರೀ' ಪ್ರಶಸ್ತಿಯನ್ನು ಎಚ್. ಆರ್. ಬಸವರಾಜಪ್ಪ ಅವರಿಗೆ ನೀಡಿ ಗೌರವಿಸಲಾಗುವುದು.


## ಸಾಣೇಹಳ್ಳಿ : 'ಮಕ್ಕಳ ಹಬ್ಬ'ಕ್ಕೆ ಆಹ್ವಾನ

ಸಾಣೇಹಳ್ಳಿ, ಮಾ.20- ಇಲ್ಲಿನ ಶ್ರೀ ಶಿವಕುಮಾರ ಕಲಾಸಂಘ ಮತ್ತು ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆಯ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 12 ರಿಂದ 30ರವರೆಗೆ 'ಮಕ್ಕಳ ಹಬ್ಬ' (ಬೇಸಿಗೆ ಶಿಬಿರ) ವನ್ನು ಆಯೋಜಿಸಲಾಗಿದೆ.

ಈ ಶಿಬಿರದಲ್ಲಿ ಕೋಲಾಟ, ಚಿತ್ರಕಲೆ, ಮಣ್ಣಾಟ, ವೀರಗಾಸೆ, ಯೋಗಾಸನ, ರಂಗಾಟಗಳು, ದಿನಕ್ಕೊಂದು ಪದ್ಯ ರಚನೆ, ಮುಖವಾಡ ತಯಾರಿ, ಕಥೆ ಹೇಳುವ ಮತ್ತು ಕಥೆ ಕಟ್ಟುವ ತರಗತಿ, ಮಕ್ಕಳ ಸಿನಿಮಾ ವೀಕ್ಷಣೆ, ಮಕ್ಕಳ ತೇರು, ಪರಿಸರದ ಮೇಲಿನ ಉಪನ್ಯಾಸ, 3 ಅಥವಾ 4 ನಾಟಕಗಳ ತಯಾರಿ ಹಾಗೂ ಪ್ರದರ್ಶನ ಮುಂತಾದ ಚಟುವಟಿಕೆಗಳಿರುತ್ತವೆ.

ಶಿಬಿರದ ಅವಧಿಯಲ್ಲಿ ಮಕ್ಕಳು ಸಾಣೇಹಳ್ಳಿಯಲ್ಲಿಯೇ ಇರುವುದು ಕಡ್ಡಾಯವಾಗಿದ್ದು, ಅವರಿಗೆ ಊಟ-ವಸತಿಯ ಸೌಲಭ್ಯವಿದೆ. 10 ರಿಂದ 14 ವರ್ಷ ವಯಸ್ಸಿನ ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಬಹುದು. ವಿವರಕ್ಕೆ ಸಂಪರ್ಕಿಸಿ : 8861043553, 9972007015.

## ನಗರದಲ್ಲಿ 23ರಂದು ಸಿದ್ಧ ಕಣ್ಣಿನ ಹನಿ



ದಾವಣಗೆರೆ, ಮಾ. 20 - ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇದೇ ದಿನಾಂಕ 23ರ ಶನಿವಾರ ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ. ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ. ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

## ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ

ದಾವಣಗೆರೆ, ಮಾ. 20 - ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟ ಪಂಗಡದ ಜನಾಂಗದವರ ಆರ್ಥಿಕ ಸಬಲೀಕರಣಕ್ಕಾಗಿ ಪಂಗಡದ ನಿರುದ್ಯೋಗ ಯುವಕ, ಯುವತಿಯರಿಗೆ, ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಆಫ್‌ಲೈನ್ ಮೂಲಕ ಇದೇ ದಿನಾಂಕ 31 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಗ್ಲಾಸ್‌ಹೌಸ್ ಹತ್ತಿರ ದೂ.ಸಂ. 08192-233309ಗೆ ಸಂಪರ್ಕಿಸಬಹುದೆಂದು ನಿಗಮದ ಜಿಲ್ಲಾ ವ್ಯವಸ್ಥಾಪಕ ಮಹಾವೀರ್ ತಿಳಿಸಿದ್ದಾರೆ.

## ಕಾಂಗ್ರೆಸ್‌ಗೆ ಪಪ್ಪು ಸೇರ್ಪಡೆ

ನವದೆಹಲಿ, ಮಾ. 20 - ಜನ ಅಧಿಕಾರ ಪಾರ್ಟಿ ನಾಯಕ ಪಪ್ಪು ಯಾದವ್ ಅವರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ. ತಮ್ಮ ಪಕ್ಷವನ್ನು ಕಾಂಗ್ರೆಸ್‌ನಲ್ಲಿ ವಿಲೀನ ಮಾಡುವುದಾಗಿಯೂ ಅವರು ಘೋಷಿಸಿದ್ದಾರೆ.

ಬಿಹಾರದಿಂದ ಐದು ಬಾರಿ ಸಂಸದರಾಗಿರುವ ಪಪ್ಪು ಯಾದವ್ ಅವರು, ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯೆ ರಣಜೀತ್ ರಂಜನ್ ಅವರ ಪತಿ. ಪಪ್ಪು ಯಾದವ್ ಅವರು ತಮ್ಮ ಪುತ್ರ ಸಾರ್ಥಕ್ ರಂಜನ್ ಹಾಗೂ ಪಕ್ಷದ ಇತರ ನಾಯಕರ ಜೊತೆ ಕಾಂಗ್ರೆಸ್ ಸೇರಿದ್ದಾರೆ.

## ರಾಹುಲ್ 'ಶಕ್ತಿ' ಹೇಳಿಕೆ ವಿರುದ್ಧ ದೂರು

ನವದೆಹಲಿ, ಮಾ. 20 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ 'ಶಕ್ತಿ' ಹೇಳಿಕೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ಬಳಿ ಬಿಜೆಪಿ ದೂರು ದಾಖಲಿಸಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತಮ್ಮ ಹೇಳಿಕೆಯಿಂದ ಧಾರ್ಮಿಕ ಭಾವನೆಗಳನ್ನು ಅವಮಾನಿಸಿದ್ದಾರೆ. ಅವರು ನಾರಿ ಶಕ್ತಿಗೆ ಅವಮಾನಿಸಿದ್ದಾರೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳನ್ನು ಭೇಟಿ ಮಾಡಿದ ನಂತರ ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

ಮುಂಬೈನಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡಿದ್ದ ರಾಹುಲ್ ಗಾಂಧಿ, 'ಹಿಂದೂ ಧರ್ಮದಲ್ಲಿ ಶಕ್ತಿ ಎಂಬ ಪದವಿದೆ. ನಾವು ಶಕ್ತಿ ವಿರುದ್ಧ ಹೋರಾಡುತ್ತಿದ್ದೇವೆ' ಎಂದಿದ್ದರು.

# ರೈತ ಧರ್ಮವೇ ಪ್ರಾಚೀನ, ದೊಡ್ಡ ಸಂಸ್ಕೃತಿ

**ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ರೈತ ಸಂಘದ ರಾಜ್ಯ ಅಧ್ಯಕ್ಷ ಹೆಚ್. ಆರ್. ಬಸವರಾಜಪ್ಪ ಅಭಿಮತ**

ಹರಿಹರ, ಮಾ.20 - ರೈತ ಧರ್ಮ ಅತ್ಯಂತ ಪ್ರಾಚೀನ ಧರ್ಮವಾಗಿದ್ದು, ರೈತ ಸಂಸ್ಕೃತಿ ಅತ್ಯಂತ ದೊಡ್ಡದು ಎಂದು ರೈತ ಸಂಘದ ರಾಜ್ಯ ಅಧ್ಯಕ್ಷ ಹೆಚ್. ಆರ್. ಬಸವರಾಜಪ್ಪ ತಿಳಿಸಿದರು.

13ನೇ ಜಿಲ್ಲಾ ಸಮ್ಮೇಳನದ ಅಂಗವಾಗಿ ನಗರದ ಸಿದ್ದೇಶ್ವರ್ ಪ್ಯಾಲೇಸ್ ಸಭಾಂಗಣದ ಮಿಠಾಯಿ ಡಿ. ಉಜ್ಜೇಶ್ ಸಭಾಂಗಣದಲ್ಲಿ ನಡೆದ ಇತಿಹಾಸ ಮತ್ತು ಕೃಷಿ, ದಲಿತ, ಚಳವಳಿ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕಷ್ಟ ಎಂದು ಬಂದವರಿಗೆ ನೆರವಾಗುವುದು ಕೃಷಿ ಸಂಸ್ಕೃತಿ. ಯೋಧ ಹಾಗೂ ರೈತರಿಗೆ ಗೌರವಿಸುವ ಸಂಸ್ಕೃತಿ ಬೆಳೆಸಿಕೊಳ್ಳಬೇಕು. ರೈತರು ತಮ್ಮ ಕಾಯಕದಿಂದ ಜನತೆಗೆ ಆಹಾರ ನೀಡುತ್ತಿದ್ದಾರೆ ಎಂದರು.

ಡಾ. ಎ.ಬಿ. ರಾಮಚಂದ್ರಪ್ಪ ಮಾತನಾಡಿ, ದಲಿತ ಚಳುವಳಿಗಳು ಇತರೆ ಚಳುವಳಿಗಿಂತ ಭಿನ್ನವಾಗಿವೆ. ಸ್ಥಾಪಿತ ವ್ಯವಸ್ಥೆ ಹೋಗಲಾಡಿಸಿ, ಸಂವಿಧಾನ ಬದ್ಧ ವ್ಯವಸ್ಥೆ ತರಲು ದಲಿತ ಚಳುವಳಿಗಳು ನಡೆದಿವೆ. ರಾಜಕೀಯ ಉದ್ದೇಶದಿಂದ ದಲಿತ ಚಳುವಳಿಗಳು ನಡೆದಿಲ್ಲ ಎಂದರು.

ದಲಿತ ನಾಯಕ ಪ್ರೊ. ಕೃಷ್ಣಪ್ಪ ಅವರು ಮದ್ಯ ನಿಷೇಧ, ಹೋಬಳಿಗೊಂದು ಶಾಲೆ ಹಾಗೂ ಹಾಸ್ಟೆಲ್‌ಗಳಿಗಾಗಿ ಹೋರಾಟ ನಡೆಸಿದರು. ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಸರ್ಕಾರ ಹಾಸ್ಟೆಲ್‌ಗಳನ್ನು ತೆರೆದಿದ್ದರಿಂದ ಅಕ್ಷರಸ್ಥರ ಸಂಖ್ಯೆ ಹೆಚ್ಚಾಯಿತು ಎಂದರು.

ಪ್ರೊ. ಕೃಷ್ಣಪ್ಪ ಅವರು ಭೂ ರಹಿತರಿಗೆ ಭೂಮಿ ಒದಗಿಸಲು ಹೋರಾಟ ನಡೆಸಿದರು. ಸಮಾಜದಲ್ಲಿನ ತಾರತಮ್ಯ ನಿವಾರಣೆಗೆ ಶ್ರಮಿಸಿ, ಗ್ರಾಮೀಣ ಜನರಿಗೆ ನ್ಯಾಯ ಒದಗಿಸುವ ಕೆಲಸ ಮಾಡಿದರು. ಮೂಢನಂಬಿಕೆಗಳ ವಿರುದ್ಧ ಜಾಗೃತಿ ಮೂಡಿಸಿದರು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ದಲಿತ ಸಂಘಟನೆಗಳು ಹಲವಾರು ಕಾರಣಗಳಿಂದ ಒಡೆದಿವೆ. ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಸುವ ಸಲುವಾಗಿ ಮತ್ತೆ ಕೃಷ್ಣಪ್ಪ ಅವರ ಹೋರಾಟದ ಹಾದಿಯಲ್ಲಿ ಸಾಗಬೇಕಿದೆ ಎಂದರು.

ಹಿರಿಯ ವಿದ್ವಾಂಸ ಹೆಚ್.ಎಸ್. ಹರಿಶಂಕರ್ ಮಾತನಾಡಿ, ಹರಿಹರ ಕ್ಷೇತ್ರಕ್ಕೆ ಅನೇಕ ರಾಜರುಗಳ ಕೊಡುಗೆ ಅಪಾರವಾಗಿದೆ. ಹರಿಹರ ನಗರದ ಬಗ್ಗೆ ಅನೇಕ ಶಾಸನಗಳಲ್ಲಿ ಬರೆದಿದ್ದಾರೆ. ಹರಿಹರ ಸಮನ್ವಯದ ಸಂಕೇತವಾಗಿದೆ. ಎಂದು ಹೇಳಿದರು

ಈ ಸಂದರ್ಭದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ, ಸಮ್ಮೇಳನಾಧ್ಯಕ್ಷ ಪ್ರೊ ಸಿ.ವಿ. ಪಾಟೀಲ್, ಎ.ಬಿ. ರಾಮಚಂದ್ರಪ್ಪ, ಅಮರಾವತಿ ಮಹಾದೇವಪ್ಪ ಗೌಡ್ರು, ಜಿಗಳಿ ಆನಂದಪ್ಪ, ಮಂಜುನಾಥ್ ಪಾಟೀಲ್, ಹೆಚ್. ಎಸ್. ಮುರಗೇಂದ್ರಪ್ಪ, ಜಿ. ಎಂ. ಭೈರವೇಶ್ವರ, ದಂಡಿ ತಿಪ್ಪೇಸ್ವಾಮಿ, ಜ್ಯೋತಿ ಉಪಾಧ್ಯಾಯ, ಪಂಕಜಾಕ್ಷಿ ಇತರರು ಉಪಸ್ಥಿತರಿದ್ದರು.

## ಜಾತ್ರೆ : ಎಸ್‌ಎಸ್‌ಕೆ ತರುಣ ಮಂಡಳಿಯಿಂದ ಮಜ್ಜಿಗೆ



ದಾವಣಗೆರೆ, ಮಾ. 20- ಎಸ್‌ಎಸ್‌ಕೆ ತರುಣ ಮಂಡಳಿ ವತಿಯಿಂದ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವದ ಪ್ರಯುಕ್ತ ಶ್ರೀ ದುರ್ಗಾಂಬಿಕ ದೇವಿ ದರ್ಶನಕ್ಕೆ ಆಗಮಿಸುವ ಸಮಸ್ತ ಭಕ್ತಾದಿಗಳಿಗೆ ಮಜ್ಜಿಗೆ ವಿತರಣಾ ಕಾರ್ಯಕ್ರಮವು ದೊಡ್ಡಪೇಟೆಯ ಶ್ರೀ ಮಾರುತಿ ಜ್ಯುವೆಲರ್ಸ್ ಆವರಣದಲ್ಲಿ ನಡೆಯಿತು. ಸಮಾಜದ ಉಪಾಧ್ಯಕ್ಷ ರಾಜು ಎಲ್. ಬದ್ದಿ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಮಹೇಶ್ ಸೋಳಂಕಿ, ಖಜಾಂಚಿ ಮಂಜುನಾಥಸಾ ಹಬೀಬ, ಅಂಬಾಭವಾನಿ ಬ್ಯಾಂಕ್ ಉಪಾಧ್ಯಕ್ಷ ಗಿರಿಧರ್ ಮೆಹರವಾಡೆ, ಸಹ ಕಾರ್ಯದರ್ಶಿ ಕೋಟಿ ಕಿರಣ್ ಲದ್ವಾ, ಓಂಪ್ರಕಾಶ ಮೆಹರವಾಡೆ, ತರುಣ ಮಂಡಳಿ ಅಧ್ಯಕ್ಷ ಪ್ರವೀಣ್ ಜಿ. ಕಾಟ್ವೆ, ಉಪಾಧ್ಯಕ್ಷ ಭರತ್ ಕಿಶನ್ ಲದ್ವಾ, ಕ್ರೀಡಾ ಕಾರ್ಯದರ್ಶಿ ಪ್ರದೀಪ್ ಬದ್ದಿ, ಸಹ ಕಾರ್ಯದರ್ಶಿ ಪ್ರಶಾಂತ ರಂಗರೇಜ್, ಸದಸ್ಯ ಕಿರಣ್ ಮೆಹರ್ವಾಡೆ, ಮಿಲನ್ ಸೋಳಂಕಿ ಉಪಸ್ಥಿತರಿದ್ದರು.

# ಅಂಕಗಳಿಗಿಂತ ಸೃಜನಶೀಲತೆ, ಜೀವ ಕಲಿಕೆ ಮುಖ್ಯ

## ಜಿ.ಎಂ. ತಾಂತ್ರಿಕ ಕಾಲೇಜ್ 'ಟೆಕ್' ಉತ್ಸವದಲ್ಲಿ ಡಾ.ಬಸವರಾಜಪ್ಪ



ದಾವಣಗೆರೆ, ಮಾ.20- ನಗರದ ಜಿಎಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಈಚೆಗೆ 'ಟೆಕ್-ಉತ್ಸವ' ಹಮ್ಮಿಕೊಳ್ಳಲಾಗಿತ್ತು. ಧಾರವಾಡ ಐಐಟಿ ಮಾಜಿ ರಿಜಿಸ್ಟ್ರಾರ್ ಡಾ. ಬಸವರಾಜಪ್ಪ ಉದ್ಘಾಟಿಸಿದರು.

ಕೇವಲ ಅಂಕಗಳಿಗಿಂತ ಸೃಜನಶೀಲತೆ ಮತ್ತು ಜೀವ ಕಲಿಕೆ ಮುಖ್ಯವಾದದ್ದು ಎಂದು ವಿದ್ಯಾಥಿಗಳಿಗೆ ತಿಳಿಸಿದ ಡಾ. ಬಸವರಾಜಪ್ಪನವರು, ದೈನಂದಿನ ಜ್ಞಾನಗಳಿಕೆಯ ಶಕ್ತಿ ಮತ್ತು ರೊಬೋಟ್‌ಗಳ ಅಭಿವೃದ್ಧಿ ಮತ್ತು ಬಳಕೆಯ ಸುತ್ತಲಿನ ನೈತಿಕ ಪರಿಸರಗಳ ಅಗತ್ಯವನ್ನು ಮತ್ತು ಕಲಿಕೆಯ ಮಹತ್ವವನ್ನು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಸಂಜಯ್ ಪಾಂಡೆ ಎಂ. ಬಿ. ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಯಶಸ್ವಿಯಾಗಲು ಬಗೆ ಬಗೆಯ ತಂತ್ರ ಜ್ಞಾನದ ಕೌಶಲ್ಯಗಳ ಅನುಭವಗಳನ್ನು, ವಿವಿಧ ಬಗೆಯ ಉತ್ತೇಜನಕಾರಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಮಹತ್ವದ ಉದ್ದೇಶವಾಗಿರಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಸಂಯೋಜಕ ಡಾ. ಮುದಸ್ಸರ್ ಪಾಷಾ, ರೋಬೊಟಿಕ್ಸ್ ಮತ್ತು ಆಟೋಮೇಷನ್ ವಿಭಾಗದ ಪ್ರಾಧ್ಯಾಪಕ ಡಾ. ಡಿ. ಜಿ. ರಾಜಕುಮಾರ್ ತಿಳಿಸಿದರು.

ಉದ್ಯೋಗ ಮತ್ತು ತರಬೇತಿ ಮುಖ್ಯಸ್ಥ ತೇಜಸ್ವಿ ಕಟ್ಟಿಮನಿ ಮತ್ತು ಇತರರು ಉಪಸ್ಥಿತರಿದ್ದರು.

# ಮಕ್ಕಳೊಡನೆ ಪಾಲಕರು ಪ್ರೀತಿಯಿಂದ ವರ್ತಿಸಬೇಕು



ದಾವಣಗೆರೆ, ಮಾ.20- ಇಲ್ಲಿನ ವಿನಾಯಕ ಬಡಾವಣೆ ವಿದ್ಯಾನಗರದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಇತ್ತೀಚೆಗೆ ವಿನೂತನ ಸೂಪರ್ ಜೋಡಿ ಕಾರ್ಯಕ್ರಮ ನಡೆಯಿತು.

ಈ ವೇಳೆ ಸನ್ಮಾನ ಸ್ವೀಕರಿಸಿ ಮಾತನಾಡಿದ ಜಸ್ಟಿನ್ ಡಿಸೋಜಾ ಅವರು, ಬಾಲ್ಯಾವಸ್ಥೆಯಲ್ಲೇ ಮಕ್ಕಳ ತಪ್ಪುಗಳನ್ನು ತಿದ್ದಬೇಕು ಮತ್ತು ತಂದೆ-ತಾಯಿಯರು ಮಕ್ಕಳೊಡನೆ ಪ್ರೀತಿಯಿಂದ ವರ್ತಿಸಬೇಕು ಎಂದು ಸಲಹೆ ನೀಡಿದರು.

**50 ವರ್ಷ ಮೇಲ್ಪಟ್ಟವರು:** ಲೀಲಾ ಶೇಖರ್ , ಶೈಲಾ ಪಾಲಾಕ್ಷ (ಪ್ರಥಮ), ಲತಾ ಸತೀಶ್, ಪುಷ್ಪಾ ಬಸವರಾಜು (ದ್ವಿತೀಯ), ಶೋಭಾ ಜಯಣ್ಣ, ನೇತ್ರಾವತಿ ಮಂಜುನಾಥ್ (ತೃತೀಯ) ಬಹುಮಾನ ಗಳಿಸಿದ್ದಾರೆ.

**50 ವರ್ಷದ ಒಳಗಿನವರು:** ವೀಣಾ ಕೃಪಾ, ತನುಜಾ ರುದ್ರಸ್ವಾಮಿ (ಪ್ರಥಮ), ಮಂಜುಳಾ ನಾಗರಾಜ್, ವೀಣಾ ಮಹಾಂತೇಶ್ (ದ್ವಿತೀಯ), ಸಹನಾ, ಕವಿತಾ ಕೇಶವಮೂರ್ತಿ (ತೃತೀಯ) ಬಹುಮಾನ ಪಡೆದಿದ್ದಾರೆ.

ದೇವಿಕಾ ವಿಜಯ್ ಕುಮಾರ್ ಬಹುಮಾನ ವಿತರಿಸಿದರು.

ಸಮಾಜದ ಅಧ್ಯಕ್ಷರಾದ ರೇಖಾ ಓಂಕಾರಪ್ಪ, ಜಯ ವೇಣುಗೋಪಾಲ, ರಂಜಿತಾ ಕುಮಾರ್, ವಾಣಿರಾಜ್, ವಿನೋದ ಶಿವಕುಮಾರ್, ಶಶಿ ಶಿವಯ್ಯ, ಶೈಲಜಾ ತಿಮ್ಮೇಶ್, ರೂಪಾ ಶಂಕರ್ ಮೂರ್ತಿ, ಕಲ್ಪನಾ ವಿನಾಯಕ, ಚೇತನಾ ಮಂಜುನಾಥ್ ಇತರರು ಇದ್ದರು.

# ಸ್ವಾತಂತ್ರ್ಯ ಸಂಗ್ರಾಮದಲ್ಲೂ ಸಿದ್ದಾರೂಢರ ಪಾತ್ರ ಅನನ್ಯ

## ಪುರಾಣ ಮಂಗಲ ಕಾರ್ಯಕ್ರಮದಲ್ಲಿ ರವೀಂದ್ರಗೌಡ ಪಾಟೀಲ

ರಾಣೇಬೆನ್ನೂರು, ಮಾ.20- ಮಹಾತ್ಮ ಗಾಂಧೀಜಿ, ನೆಹರೂ ಮತ್ತು ಮೈಲಾರ ಮಹಾದೇವಪ್ಪನಂತಹ ಹೋರಾಟಗಾರರು ಸಹ ಸದ್ಗುರು ಸಿದ್ಧಾರೂಢರ ಜೊತೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ಪ್ರಮುಖ ವಿಚಾರವಾಗಿ ಚರ್ಚಿಸುತ್ತಿದ್ದರು.

ಈ ಸಂದರ್ಭದಲ್ಲಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡುವ ಮೂಲಕ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಸಿದ್ಧಾರೂಢರು ತಮ್ಮ ಅನನ್ಯ ಸೇವೆ ಸಲ್ಲಿಸಿದ್ದಾರೆಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಹೇಳಿದರು.

ನಾಗೇನಹಳ್ಳಿ ಗ್ರಾಮದಲ್ಲಿ ಜಗದ್ಗುರು ಸಿದ್ಧಾರೂಢ ಸ್ವಾಮೀಜಿ ಮತ್ತು ಶ್ರೀ ಬಸವರಾಜ ಮುಪ್ಪಿನಾರ್ಯ ಸ್ವಾಮೀಜಿಯವರ 5 ದಿನದ ಪುರಾಣ ಮಂಗಲ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಮುಪ್ಪಿನಾರ್ಯ ಸ್ವಾಮೀಜಿಯವರು ಸದ್ಗುರು ಸಿದ್ದಾರೂಢರ ಅನುಯಾಯಿಯಾ ಗಿದ್ದು, ಅಂತಹ ಮಹಾನ್ ಪುರುಷರು ನಡೆದಾಡಿದ ಕರ್ಮಭೂಮಿಯಲ್ಲಿ ಜನಿಸಿದ ನಾವೆಲ್ಲರೂ ಧನ್ಯರು ಎಂದರು.



ಅಧ್ಯಕ್ಷತೆಯನ್ನು ಜಯನಗೌಡ ಹ. ಮುದಕನಗೌಡ್ರ ವಹಿಸಿದ್ದರು. ಸಾನ್ನಿಧ್ಯವನ್ನು ಕುಪ್ಪೇಲೂರು ಶ್ರೀ ಸದ್ಗುರು ಸಿದ್ದಾರೂಢ ಮಠದ ಶ್ರೀ ಪ್ರಿಯಾನಂದ ಸ್ವಾಮೀಜಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರಭುಗೌಡ ಹ. ಗೋವಿಂದಗೌಡ್ರ, ಶ್ರೀ ಸಿದ್ದಾರೂಢ ದಾಸಣ್ಣನವರ, ಸಿದ್ದನಗೌಡ ಗೋವಿಂದಗೌಡ್ರ ಆಗಮಿಸಿದ್ದರು. ಸಾನ್ನಿಧ್ಯವನ್ನು ಮಾತೋಶ್ರೀ ಅನ್ನಪೂರ್ಣಮ್ಮನವರು ವಹಿಸಿದ್ದರು.

ಷಣ್ಮುಖನಗೌಡ ಸಣ್ಣಹನುಮನಗೌಡ್ರ ನಿರೂಪಿಸಿದರು. ಹನುಮಂತ ಗೌಡ ಪೊಲೀಸಗೌಡ್ರ ವಂದಿಸಿದರು.

# ಟೈಲರ್‌ಗಳ ಜೀವನ ಭದ್ರತೆಗೆ ಕೇರಳ, ತಮಿಳುನಾಡಿನಂತೆ ಸೌಲಭ್ಯ ನೀಡಲು ಆಗ್ರಹ

ಹೊನ್ನಾಳಿ, ಮಾ. 20 - ಕಳೆದ 25 ವರ್ಷಗಳ ಹಿಂದೆ ಟೈಲರ್ ಕೆಲಸ ಮಾಡುವ ಸ್ತ್ರೀ-ಪುರುಷರ ಜೀವನ ಭದ್ರತೆಗಾಗಿ ಕರ್ನಾಟಕ ಸ್ಟೇಟ್ ಟೈಲರ್ ಅಸೋಸಿಯೇಷನ್ ಎಂದು ರಾಜ್ಯಮಟ್ಟದ ಸಂಘಟನೆ ರಚನೆಗೊಂಡಿದ್ದು, ನಮ್ಮ ಜೀವನ ಸುಧಾರಣೆಗಾಗಿ ಸರ್ಕಾರ ಟೈಲರ್ ಕ್ಷೇಮನಿಧಿ ಮಂಡಳಿ ರಚಿಸಬೇಕಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಬಿ.ಎ. ನಾರಾಯಣ್ ಹೇಳಿದರು.




ಹೊನ್ನಾಳಿ ತಾಲ್ಲೂಕು ಟೈಲರ್ ಸಂಘವು ಕಿತ್ತೂರುರಾಣಿ ಚೆನ್ನಮ್ಮ ಸಮುದಾಯ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಜ್ವಲ್ ಕುಮಾರ್ ಮಾತನಾಡಿ ಕೇರಳ, ತಮಿಳು ನಾಡಿನಲ್ಲಿ ಟೈಲರ್ ಸಂಘವು ಸಂಘಟನೆಗೊಂಡು ಹತ್ತು ವರ್ಷಗಳಿಂದ ಮದುವೆ, ಹೆರಿಗೆ, ಆರೋಗ್ಯ, ಜೀವನ ಭದ್ರತೆಯಂತಹ ಅನೇಕ ಸೌಲಭ್ಯಗಳ ಪಡೆಯುತ್ತಿದ್ದು ರಾಜ್ಯದಲ್ಲಿ ಯೋಜನೆ ಜಾರಿಗೊಳ್ಳಬೇಕಾದರೆ 80 ರೂ.ಗಳ ಸದಸ್ಯತ್ವ ಪಡೆದು ಸಂಘಟನೆ ಹೆಚ್ಚು ಬಲಗೊಳ್ಳಬೇಕಿದೆ ಎಂದರು.

ತಾಲ್ಲೂಕು ಟೈಲರ್ ಸಂಘದ ಅಧ್ಯಕ್ಷ ನಾಗರಾಜ್ ಮಾತನಾಡಿ, ನಮ್ಮ ಸಂಘದ ಪದಾಧಿಕಾರಿಗಳು ಭವಿಷ್ಯ ನಿಧಿ ಪಿಂಚಣಿ ಯೋಜನೆ ಆರೋಗ್ಯ ವಿಮೆಯಂತಹ ಸರ್ಕಾರದ ಯೋಜನೆಗಳನ್ನು ಪಡೆಯುವುದು ಮುಖ್ಯ ಉದ್ದೇಶವಾಗಿದ್ದು, ತಾಲ್ಲೂಕಿನಲ್ಲಿ 10,000ಕ್ಕೂ ಹೆಚ್ಚು ಟೈಲರ್‌ಗಳಿದ್ದು 200 ಟೈಲರ್‌ಗಳು ಮಾತ್ರ ಸದಸ್ಯತ್ವ ಪಡೆದಿರುವರು. ಸ್ಮಾರ್ಟ್ ಕಾರ್ಡ್ ಹಾಗೂ ಇ-ಶ್ರಮ ಮತ್ತು 18 ವರ್ಷದ ಮೇಲ್ಪಟ್ಟ ವೃತ್ತಿ ಕಸುಬುದಾರರು ಕೇಂದ್ರ ಸರ್ಕಾರದ ವಿಶ್ವಕರ್ಮ ಯೋಜನೆಗೆ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯಬೇಕಿದೆ ಎಂದರು.

ರಾಜ್ಯ ಖಜಾಂಚಿ ರಾಮಚಂದ್ರಪ್ಪ, ತಾಲ್ಲೂಕು ಉಪಾಧ್ಯಕ್ಷ ರಾಜು, ಕಾರ್ಯದರ್ಶಿ ಬಸವರಾಜ್, ಖಜಾಂಚಿ ವಸಂತ್ ಕುಮಾರ್, ಈಶ್ವರಾ ಚಾರಿ, ಶಿವಪ್ಪ ಸಾಸಿವೆಹಳ್ಳಿ, ಕಾವ್ಯ ಹನಗವಾಡಿ, ರಾಜು ಇನ್ನಿತರರಿದ್ದರು.

## ಐಎನ್‌ಡಿಐಎ ಪರವಾಗಿ ಪ್ರಣಾಳಿಕೆ

**(1ನೇ ಪುಟದಿಂದ)** ಮಹಿಳೆಯರಿಗೆ ಮುಟ್ಟಿನ ರಜೆ ನೀಡಲೂ ಕ್ರಮ ತೆಗೆದುಕೊಳ್ಳಲಾಗುವುದು. ಲಿಂಗ ಸಮಾನತೆಯ ಕಡೆ ಹೆಜ್ಜೆ ಹಾಕಲಾಗುವುದು ಎಂದು ಪಕ್ಷ ಹೇಳಿದೆ. ಮನೆ ಕೆಲಸದವರಿಗಾಗಿ ಏಕೀಕೃತ ರಾಷ್ಟ್ರೀಯ ಕಾಯ್ದೆ ಜಾರಿಗೆ ತರುವ ಮೂಲಕ ಅವರ ಹಕ್ಕು ರಕ್ಷಿಸಲಾಗುವುದು ಎಂದೂ ಪಕ್ಷ ಹೇಳಿದೆ.

ಜಿಲ್ಲಾ ಮಟ್ಟದಲ್ಲಿ ಮಹಿಳೆಯರೇ ನಿರ್ವಹಿಸುವ ಮಾರುಕಟ್ಟೆಗಳನ್ನು ರೂಪಿಸಲಾಗುವುದು. ಮಹಿಳಾ ಉದ್ಯಮಿಗಳಿಗೆ ವಿಶಿಷ್ಟ ಗುರುತಿನ ಚೀಟಿ ನೀಡಲಾಗುವುದು. ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 75 ರೂ.ಗೆ ಹಾಗೂ ಡೀಸೆಲ್ ಬೆಲೆಯನ್ನು 65 ರೂ.ಗೆ ನಿಗದಿ ಪಡಿಸಲಾಗುವುದು.

ಅಡುಗೆ ಅನಿಲದ ಬೆಲೆಯನ್ನು ಪ್ರತಿ ಸಿಲಿಂಡರ್‌ಗೆ 500 ರೂ.ಗಳಿಗೆ ನಿಗದಿ ಪಡಿಸಲಾಗುವುದು ಎಂದೂ ತಿಳಿಸಲಾಗಿದೆ.

## ಸಾಲಕಟ್ಟೆಯಲ್ಲಿ ಆಸ್ಪೃಶ್ಯತಾ ನಿವಾರಣೆ ಕುರಿತು ಬೀದಿನಾಟಕ ಪ್ರದರ್ಶನ



ಮಲೇಬೆನ್ನೂರು, ಮಾ.20- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ದೌರ್ಜನ್ಯ ಪ್ರತಿಬಂಧ ಅಧಿನಿಯಮ 1989 ಹಾಗೂ 2015 ಮತ್ತು ನಿಯಮಗಳು 1985 ಮತ್ತು 2016ರ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಇತ್ತೀಚಿಗೆ ಸಾಲಕಟ್ಟೆ ಗ್ರಾಮದಲ್ಲಿ ಆಯೋಜಿಸಲಾಗಿತ್ತು.

ಹರಿಹರ ತಾಲ್ಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ, ಸಾಲಕಟ್ಟೆ ಗ್ರಾಮ ಪಂಚಾಯಿತಿ ಇವರ ಸಹಯೋಗದಲ್ಲಿ ಹರಿಹರ ತಾಲ್ಲೂಕಿನ ಜಿಗಳಿಯ 'ರಂಗಶ್ರೀ ಕಲಾತಂಡ' ಕಲಾವಿದರು ಪ್ರದರ್ಶನ ಮಾಡಿದ 'ಮೈಲಿಗೆ' ಎಂಬ ಬೀದಿನಾಟಕ ಪ್ರದರ್ಶನದಲ್ಲಿ ಜನಸಮುದಾಯದಕ್ಕೆ ಜಾತಿ ತಾರತಮ್ಯ ಮಾಡಬಾರದು ಎನ್ನುವ ಕಲಾವಿದರ ಸಂದೇಶ ತುಂಬಾ ಮನೋಗ್ನವಾಗಿತ್ತು.

ರಂಗಶ್ರೀ ಕಲಾತಂಡ ನಾಯಕ ಜಿಗಳಿ ರಂಗನಾಥ್, ಬಿ.ಹೆಚ್. ಉಮೇಶ್, ಸಿರಿಗೆರೆ ಶಿವಕುಮಾರ್, ಲಿಂಗರಾಜ್, ದ್ವಾರಕೀಶ್, ಶಾಂಭಾವಿ, ನೀಲಮ್ಮ, ಸುಲೋಚನಾ, ಶಿವಮ್ಮ ತಂಡದಲ್ಲಿದ್ದರು.

ಗ್ರಾಮ ಪಂಚಾಯತಿ ಕಾರ್ಯದರ್ಶಿ ಕೆ.ಎಸ್.ರುದ್ರಪ್ಪ ಅವರು ತಮಟೆ ಬಾರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಗ್ರಾ.ಪಂ. ಅಧ್ಯಕ್ಷರಾದ ಜ್ಯೋತಿ ನಾಗರಾಜ್, ಉಪಾಧ್ಯಕ್ಷರಾದ ಸೌಭಾಗ್ಯ ಚಂದ್ರಪ್ಪ, ಪಿಡಿಓ ದಾಸರ ರವಿ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು ಭಾಗವಹಿಸಿದ್ದರು.

## ಉಚಿತ ಕೊಡುಗೆ ಪ್ರಶ್ನಿಸಿ ಅರ್ಜಿ

**(1ನೇ ಪುಟದಿಂದ)** ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಹೇಳಿದೆ.

ಅಶ್ವಿನಿ ಉಪಾಧ್ಯಾಯ್ ಅವರ ಪರವಾಗಿ ಹಿರಿಯ ವಕೀಲ ವಿಜಯ್ ಹನ್ಸಾರಿಯ ಅವರು ನ್ಯಾಯಾಲಯದ ಎದುರು ಅರ್ಜಿ ದಾಖಲಿಸಿದ್ದರು. ಲೋಕಸಭಾ ಚುನಾವಣೆಗೆ ಮುಂಚೆ ಈ ಬಗ್ಗೆ ವಿಚಾರಣೆ ನಡೆಸಬೇಕು ಎಂದು ಅರ್ಜಿದಾರರು ಮನವಿ ಮಾಡಿಕೊಂಡಿದ್ದರು.

ಮತದಾರರ ಮೇಲೆ ಪ್ರಭಾವ ಬೀರಿ ರಾಜಕೀಯ ಲಾಭ ಪಡೆಯುವುದು ಸಂವಿಧಾನದ ಉಲ್ಲಂಘನೆ. ಇಂತಹ ಪ್ರವೃತ್ತಿ ಮೇಲೆ ಸಂಪೂರ್ಣ ನಿಷೇಧ ಹೇರಬೇಕು ಎಂದು ಅರ್ಜಿದಾರರು ಮನವಿ ಮಾಡಿಕೊಂಡಿದ್ದರು.

ಚುನಾವಣಾ ಲಾಭಕ್ಕಾಗಿ ಸಾರ್ವಜನಿಕ ಹಣದಿಂದ ಅತಾರ್ಕಿಕ ಕೊಡುಗೆ ನೀಡುವುದರ ಮೇಲೆ ತಡೆ ಹಾಕಬೇಕು. ಇದರಿಂದ ಮತದಾರರ ಮೇಲೆ ಪ್ರಭಾವ ಬೀರಿದಂತಾಗುತ್ತದೆ ಹಾಗೂ ಚುನಾವಣಾ ಪ್ರಕ್ರಿಯೆಯ ಮೇಲೆ ಪರಿಣಾಮವಾಗುತ್ತದೆ ಎಂದು ಅರ್ಜಿದಾರರು ಹೇಳಿದ್ದರು.

ಇತ್ತೀಚಿನ ದಿನಗಳಲ್ಲಿ ರಾಜಕೀಯ ಪಕ್ಷಗಳು ಮತದಾರರ ಮೇಲೆ ಉಚಿತ ಕೊಡುಗೆಗಳ ಮೂಲಕ ಪ್ರಭಾವ ಬೀರುತ್ತಿವೆ. ಇದರಿಂದ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಅಪಾಯ ಎದುರಾಗಿದೆ. ಅಲ್ಲದೇ, ಸಂವಿಧಾನದ ಸ್ಫೂರ್ತಿಗೂ ಧಕ್ಕೆಯಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಸರ್ಕಾರದ ಬೊಕ್ಕಸದಿಂದ ಉಚಿತ ಕೊಡುಗೆ ನೀಡುವುದರು ಎಂದರೆ, ಮತಕ್ಕಾಗಿ ಲಂಚ ನೀಡಿದಂತೆ. ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ರಕ್ಷಿಸಲು ಇಂತಹ ಪ್ರವೃತ್ತಿಗೆ ತಡೆ ಹಾಕಬೇಕು ಎಂದು ಅರ್ಜಿದಾರರು ಕೋರಿದ್ದರು.

## ಉಳಿದ ಅಭ್ಯರ್ಥಿಗಳ ನಿರ್ಧಾರ

**(1ನೇ ಪುಟದಿಂದ)** ವಿಚಾರದಲ್ಲಿ ನಮ್ಮಲ್ಲಿ ಗೊಂದಲವಿಲ್ಲ, ಪಟ್ಟಿ ಹೊರ ಬಂದ ನಂತರ ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಮಾಡಲಾಗುವುದು ಎಂದು ಹೇಳಿದರು.

ಆಡಳಿತಾರೂಢ ಕಾಂಗ್ರೆಸ್‌ಗೆ ಕರ್ನಾಟಕ ದಲ್ಲಿ ಸಮರ್ಥ ಅಭ್ಯರ್ಥಿಗಳು ದೊರೆಯದೆ, ನಮ್ಮಲ್ಲಿರುವ ಕೆಲವು ಅಸಮಾಧಾನಿತರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದೆ ಎಂದು ದೂರಿದರು. ಅಂತಹವರು ಪಕ್ಷ ಬಿಟ್ಟು ಹೋದರೆ ಏನು ಮಾಡಲು ಸಾಧ್ಯ? ಎಂದು ಪ್ರಶ್ನಿಸಿದರು. ಜೆಡಿಎಸ್ ಮೈತ್ರಿ ಮತ್ತಷ್ಟು ಗಟ್ಟಿಯಾಗಿದೆ ಎಂದು ಈಗಾಗಲೇ ಕುಮಾರಸ್ವಾಮಿ ಅವರೇ ಹೇಳಿಕೆ ನೀಡಿದ್ದಾರೆ, ಮುಂದೆ ಜಂಟಿಯಾಗಿ ಹೋರಾಟ ನಡೆಸುತ್ತೇವೆ ಎಂದರು.

## ಕೂಲಹಳ್ಳಿ ಗೋಣಿಬಸವೇಶ್ವರ ರಥೋತ್ಸವ

**(1ನೇ ಪುಟದಿಂದ)** ಚಿನ್ಮಯ ಸ್ವಾಮೀಜಿ ನೇತೃತ್ವದಲ್ಲಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ದೇಗುಲದಲ್ಲಿನ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಮೆರವಣಿಗೆ ಹೊರಡಲಾಯಿತು. ರಥವನ್ನು ಐದು ಸುತ್ತು ಪ್ರದಕ್ಷಿಣೆ ಹಾಕಿದ ನಂತರ ಗೋಣಿ ಬಸವೇಶ್ವರರ ಪಟ(ಧ್ವಜ)ವನ್ನು ಬಹಿರಂಗ ಹಾರಜಿನಲ್ಲಿ ಅಡವಿ ಸೋಮಲಾಪುರ ಮರಿಯಪ್ಪ 2.85 ಲಕ್ಷ ರೂ.ಗಳಿಗೆ ತಮ್ಮದಾಗಿಸಿಕೊಂಡರು.

ಕೊಟ್ಟೂರೇಶ್ವರ ಉತ್ಸವ ಮೂರ್ತಿಯನ್ನು ರಥಮಂಟಪದಲ್ಲಿ ಪ್ರತಿಷ್ಠಾಪಿಸುವ ಮೂಲಕ ಅರ್ಚಕರು ಮಹಾ ಮಂಗಳಾರತಿ ನೆರವೇರಿಸುತ್ತಿದ್ದಂತೆಯೇ ಭರ್ಜರಿ ಜಯಘೋಷಗಳ ನಡುವೆ ರಥೋತ್ಸವಕ್ಕೆ ಉತ್ತರಾಭಿಮುಖವಾಗಿ ಚಾಲನೆ ನೀಡಲಾಯಿತು.

ಹರಕೆ ಹೊತ್ತಿದ್ದ ಭಕ್ತರು, ರಥಕ್ಕೆ ತೆಂಗಿನಕಾಯಿ, ಬಾಳೆಹಣ್ಣು ತೂರಿ ಹರಕೆ ಸಮರ್ಪಿಸಿದರು. ಚಿತ್ರದುರ್ಗ ದಾವಣಗೆರೆ, ಬಳ್ಳಾರಿ, ಗದಗ, ಹಾಗೂ ಹಾವೇರಿ ಜಿಲ್ಲೆಗಳು ಸೇರಿದಂತೆ ನಾಡಿನಾದ್ಯಂತ ಭಕ್ತ ಸಾಗರವೇ ರಥೋತ್ಸವದ ಸಂಭ್ರಮಕ್ಕೆ ಸಾಕ್ಷಿಯಾದರು.

ಡಿವೈಎಸ್‌ಪಿ ವೆಂಕಟಪ್ಪ ನಾಯಕ, ಸಿಪಿಐ ಸಾಬಯ್ಯ, ಪಿಎಸ್‌ಐ ಶಂಭುಲಿಂಗ ಎಸ್. ಹಿರೇಮಠ್, ಕಿರಣ್‌ಕುಮಾರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಗ್ರಾ.ಪಂ ಅಧ್ಯಕ್ಷ ಬಸವರಾಜ, ಪೂಜಾರ ಕೊಟ್ರೇಶ್, ಅಂಬಳಿ ಆನಂದ, ಎಚ್.ಗೋಣೆಪ್ಪ, ವಿ.ವೆಂಕಟೇಶ, ಪಿ.ಬಸವರಾಜ, ಕೊಟ್ರೇಶ, ಅರ್ಚಕರಾದ ಸಿದ್ದಪ್ಪ, ಹಾಲೇಶ, ಶರಣಪ್ಪ ಸೇರಿ ಅಪಾರ ಭಕ್ತರು ಪಾಲ್ಗೊಂಡಿದ್ದರು.

## ದುಗ್ಗಮ್ಮನ ಜಾತ್ರೆಯಲ್ಲಿ ರಕ್ತದ ಗುಂಪಿನ ತಪಾಸಣೆ



ದಾವಣಗೆರೆ,ಮಾ.20- ಭಾರತೀಯ ರೆಡ್ ಕ್ರಾಸ್ ಸಂಸ್ಥೆ ವತಿಯಿಂದ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಪ್ರಯುಕ್ತ ಉಚಿತ ರಕ್ತದ ಗುಂಪಿನ ತಪಾಸಣಾ ಶಿಬಿರವನ್ನು ದೇವಸ್ಥಾನದ ಬಳಿ ಹಮ್ಮಿಕೊಳ್ಳಲಾಗಿತ್ತು.

ನಗರದ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಸಭಾಪತಿ ಡಾ. ಎ. ಎಂ. ಶಿವಕುಮಾರ್ ನೇತೃತ್ವದಲ್ಲಿ, ಗೌರವ ಸಭಾಪತಿ ಗೌಡರ ಚನ್ನಬಸಪ್ಪ, ಪ್ರಧಾನ ಕಾರ್ಯದರ್ಶಿ ಅನಂದ್ ಜ್ಯೋತಿ, ನಿರ್ದೇಶಕರಾದ ಕರಿಬಸಪ್ಪ ಟಿ, ನಾಗರಾಜ್ ಕೆ.ಕೆ, ಮೊಹಮ್ಮದ್ ಇನಾಯತುಲ್ಲಾ, ರವಿಕುಮಾರ್ ಎ.ಜೆ, ವೀರಭದ್ರಪ್ಪ, ಎಂ.ಜಿ ಶ್ರೀಕಾಂತ್, ಚನ್ನಬಸವ ಶೀಲವಂತ್, ವ್ಯವಸ್ಥಾಪಕ ರವೀಂದ್ರನಾಥ್ ಆರ್.ಧಾವಸ್ಕರ್, ಸಂಚಾಲಕರು ಮತ್ತು ಆಪ್ತ ಸಮಾಲೋಚಕ ಶಿವಕುಮಾರ ಎನ್.ಜಿ, ಪ್ರಯೋಗ ಶಾಲಾ ತಂತ್ರಜ್ಞ ಮೇಲ್ವಿಚಾರಕ ವಿನಾಯಕ ಆರ್, ಕೊಟ್ರೇಶ್ ಇತರರು ಹಾಜರಿದ್ದರು.

## ಅಗ್ನಿವೀರ : ಆನ್‌ಲೈನ್ ನೋಂದಣಿ

ದಾವಣಗೆರೆ, ಮಾ.20- ಮಂಗಳೂರು ಸೇನಾ ನೇಮಕಾತಿ ಕೇಂದ್ರದ ವತಿಯಿಂದ ಅಗ್ನಿವೀರ ನೇಮಕಾತಿಗೆ ಆನ್‌ಲೈನ್ ಸಾಮಾನ್ಯ ಪ್ರವೇಶ ಪರೀಕ್ಷೆ ಏಪ್ರಿಲ್ 22 ರಿಂದ ಪ್ರಾರಂಭವಾಗಲಿದೆ. ದಾವಣಗೆರೆ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ, ಬಾಗಲಕೋಟೆ, ವಿಜಯಪುರ, ಧಾರವಾಡ, ಗದಗ, ಹಾವೇರಿ ಜಿಲ್ಲೆಯ ಪುರುಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಸೇನೆಯಲ್ಲಿ ಜನರಲ್, ಡ್ಯೂಟಿ, ಟೆಕ್ನೀಷಿಯನ್, ಟ್ರೇಡ್ಸ್‌ಮನ್, ಕಚೇರಿ ಸಹಾಯಕ, ಸ್ಟೋರ್ ಕೀಪರ್ ಮತ್ತಿತರೆ ಹುದ್ದೆಗಳಿಗೆ ಆನ್ ಲೈನ್ ಪರೀಕ್ಷೆ ನಡೆಯಲಿದೆ. ಅಭ್ಯರ್ಥಿಗಳ ವಯೋಮಿತಿ, ಶೈಕ್ಷಣಿಕ ಅರ್ಹತೆ ಮತ್ತಿತರೆ ಮಾಹಿತಿಗಳನ್ನು ಆರ್ಮಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು (joinindianarmy.nic.in) ವೆಬ್‌ಸೈಟ್‌ನಲ್ಲಿ ನಾಡಿದ್ದು ದಿನಾಂಕ 22 ರೊಳಗೆ ಹೆಸರು ನೋಂದಣಿ ಮಾಡಬೇಕು. ಪರೀಕ್ಷೆಯ ಪ್ರವೇಶ ಪತ್ರವನ್ನು ಅಭ್ಯರ್ಥಿಗಳ ಇ-ಮೇಲ್‌ಗೆ ಕಳುಹಿಸಲಾಗುವುದು ಎಂದು ತಿಳಿಸಿದೆ.

## ಸಂಪ್ರದಾಯದಂತೆ ದುಗ್ಗಮ್ಮನ ಜಾತ್ರೆ

**(1ನೇ ಪುಟದಿಂದ)** ಹೋಳಿ. ಊರ ತುಂಬೆಲ್ಲಾ ಮಾಂಸದ ಘಾಟು.

ಮಾಂಸದ ಅಂಗಡಿಗಳ ಸುತ್ತವೂ ಜನವೋ ಜನ. ಮಾಂಸದ ಅಂಗಡಿಗಳಲ್ಲಿ ಕಟ್...ಕಟ್...ಸದ್ದು, ವ್ಯಾಪಾರಿಯ ಚಾಕುವಿಗೆ ಬಿಡುವೇ ಇರಲಿಲ್ಲ. ಮಧ್ಯಾಹ್ನದ ಹೊತ್ತಿಗೆ ಜನರ ಮುಖದಲ್ಲಿ ಬಾಡೂಟ ಉಂಡ ತೃಪ್ತಿ. ಸಸ್ಯಹಾರಿಗಳು ಮರುಗಿದರು, ಮಾಂಸಾಹಾರಿಗಳು ಸಂಭ್ರಮಿಸಿದರು.

## ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭ

**(1ನೇ ಪುಟದಿಂದ)** ಬಿಹಾರದಲ್ಲಿ ಹಬ್ಬದ ಹಿನ್ನೆಲೆಯಲ್ಲಿ ಮಾರ್ಚ್ 28ರವರೆಗೆ ನಾಮಪತ್ರ ಸಲ್ಲಿಸಲು ಅವಕಾಶ ನೀಡಲಾಗಿದೆ.

ಅರುಣಾಚಲ ಪ್ರದೇಶದ 60 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಸಲು ಪ್ರತ್ಯೇಕ ಅಧಿಸೂಚನೆ ಹೊರಡಿಸಲಾಗಿದೆ.

## ಸಚಿವರು, ಸಂಬಂಧಿಗಳಿಗೆ 'ಕೈ'

**(1ನೇ ಪುಟದಿಂದ)** ಚಿಕ್ಕಮಗಳೂರಿನಿಂದ ಮಾಜಿ ಸಚಿವ ಜಯಪ್ರಕಾಶ್ ಹೆಗ್ಗಡೆ, ಕೊಪ್ಪಳದಿಂದ ರಾಜಶೇಖರ್ ಹಿಟ್ನಾಳ್ ಅವರಿಗೆ ಟಿಕೆಟ್ ದೊರೆತಿದೆ. ಚಿತ್ರದುರ್ಗದಿಂದ ಚಂದ್ರಪ್ಪ, ಹುಬ್ಬಳ್ಳಿ - ಧಾರವಾಡದಿಂದ ವಿನೋದ್ ಅಸುಟಿ, ರಾಯಚೂರುನಿಂದ ಕುಮಾರ್ ನಾಯ್ಕ್ ಕಣಕ್ಕಿಳಿಯಲಿದ್ದಾರೆ. ಉಳಿದಂತೆ ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ನಾಲ್ಕು ಕ್ಷೇತ್ರಗಳ ಆಯ್ಕೆ ಕಗ್ಗಂಟಾಗಿದೆ.

## ಹಾವೇರಿ - ಗದಗ ಲೋಕಸಭಾ ಕ್ಷೇತ್ರ ವಿವರ

ರಾಣೇಬೆನ್ನೂರು, ಮಾ.20- ಶಿರಹಟ್ಟಿ, ರೋಣ ಮತ್ತು ಗದಗ ಸೇರಿದಂತೆ ಗದಗ ಜಿಲ್ಲೆಯ ಮೂರು ವಿದಾನಸಭಾ ಕ್ಷೇತ್ರಗಳು ಹಾಗೂ ಹಾವೇರಿ ಜಿಲ್ಲೆಯ ಹಾವೇರಿ, ಹಾನಗಲ್ಲ, ಹಿರೇಕೆರೂರು, ಬ್ಯಾಡಗಿ ಮತ್ತು ರಾಣೇಬೆನ್ನೂರು ಸೇರಿದಂತೆ ಒಟ್ಟು ಎಂಟು ವಿಧಾನಸಭಾ ಕ್ಷೇತ್ರಗಳ ಹಾವೇರಿ-ಗದಗ ಲೋಕಸಭಾ ಕ್ಷೇತ್ರದ ಚುನಾವಣೆಯ ಮತದಾನ ಮೇ 7 ರಂದು, ಜೂನ್ 4 ರಂದು ಮತ ಎಣಿಕೆ ನಡೆಯಲಿದೆ.

ಪುರುಷರು 1,19,169, ಮಹಿಳೆಯರು 1,17,960 ಒಟ್ಟು 2,37,140 ರಾಣೇಬೆನ್ನೂರು ವಿಧಾನಸಭಾ ಕ್ಷೇತ್ರದ ಮತದಾರರು ಸೇರಿದಂತೆ ಲೋಕಸಭಾ ಕ್ಷೇತ್ರದಲ್ಲಿ 8,95,366 ಪುರುಷ, 8,82,430 ಮಹಿಳೆಯರು

ಒಟ್ಟು17,77,877 ಮತದಾರರಿದ್ದಾರೆ. ರಾಣೇಬೆನ್ನೂರಿನ 266 ಮತಗಟ್ಟೆಗಳು ಸೇರಿದಂತೆ ಕ್ಷೇತ್ರದಲ್ಲಿ ಒಟ್ಟು 1982 ಮತಗಟ್ಟೆಗಳಿವೆ.

ಹಾವೇರಿ ಜಿಲ್ಲೆಯ 18, ಗದಗ ಜಿಲ್ಲೆಯ 10 ಸೇರಿದಂತೆ ಒಟ್ಟು 28 ಚೆಕ್ ಪೋಸ್ಟ್‌ಗಳು, ಹಾವೇರಿ ಜಿಲ್ಲೆಯ 10, ಗದಗ ಜಿಲ್ಲೆಯ 9 ಸೇರಿದಂತೆ ಒಟ್ಟು19 ವಿಡಿಯೋ ಕಣ್ಗಾವಲು ತಂಡಗಳಿವೆ. ಕ್ಷೇತ್ರದಲ್ಲಿ 8 ವಿಡಿಯೋ ವೀಕ್ಷಣಾ ತಂಡಗಳಿವೆ, 11 ಲೆಕ್ಕ ಪರಿಶೋಧಕರ ತಂಡಗಳು, 8 ಸಹಾಯಕ ಖರ್ಚು-ವೆಚ್ಚ ತಂಡಗಳು. 24 ಕ್ಷಿಪ್ರ ಪಡೆ, 191 ಸೆಕ್ಟರ್ ಅಧಿಕಾರಿಗಳಿದ್ದಾರೆ.

85 ವರ್ಷ ಮೇಲ್ಪಟ್ಟ 15,521 ಹಾಗೂ 27,434 ಅಂಗವಿಕಲ ಸೇರಿದಂತೆ ಒಟ್ಟು ಇರುವ 42,955 ಮತದಾರರಲ್ಲಿ ಮನೆಯಲ್ಲಿಯೇ ಮತದಾನ ಮಾಡಲು ಇಷ್ಟ ಪಟ್ಟವರು ಮೊದಲೇ ಮತದಾನದ ಕೋರಿಕೆ ಪತ್ರ ಪಡೆದು ನಮೂನೆಯನ್ನು ಭರ್ತಿ ಮಾಡಿ ಸಹಿ ಮಾಡಿಕೊಟ್ಟರೆ ಅವರಿಗೆ ಅವಕಾಶ ಕಲ್ಪಿಸಿ ಕೊಡಲಾಗುತ್ತದೆ ಎಂಬ ಮಾಹಿತಿಯನ್ನು ಚುನಾವಣಾ ಇಲಾಖೆ ನೀಡಿದೆ.

## ಜಾರ್ಖಂಡ್‌ನ ಬಿಜೆಪಿ ಶಾಸಕ ಪಟೇಲ್ ಕಾಂಗ್ರೆಸ್‌ಗೆ ಸೇರ್ಪಡೆ

ನವದೆಹಲಿ, ಮಾ. 20 - ಜಾರ್ಖಂಡ್‌ನ ಬಿಜೆಪಿ ಶಾಸಕ ಜೈ ಪ್ರಕಾಶ್ ಭಾಯಿ ಪಟೇಲ್ ಅವರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ. ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ಜಾರ್ಖಂಡ್‌ನ ಉಸ್ತುವಾರಿ ಗುಲಾಂ ಅಹಮದ್ ಮೀರ್ ಅವರ ಉಪಸ್ಥಿತಿಯಲ್ಲಿ ಅವರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ.



## ಬಿಜೆಪಿ ಅಧ್ಯಕ್ಷ ರಾಜಶೇಖರ್ ಅವರಿಗೆ ಅಭಿನಂದನೆ

ದಾವಣಗೆರೆ, ಮಾ. 20- ನೂತನ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜಶೇಖರ್ ಅವರನ್ನು ಮಹಾನಗರ ಪಾಲಿಕೆಯ 2008ರ ಬಿಜೆಪಿ ಮಹಾಪೌರರು, ಉಪ ಮಹಾಪೌರರು, ಸದಸ್ಯರು ಅಭಿನಂದಿಸಿದರು.

## ನಾನೊಂದು ಸುಂದರ ಅರಣ್ಯ...

ನಾನೊಂದು ಸುಂದರ ಅರಣ್ಯ
ಮಾಡದಿರಿ ನನ್ನ ಮೇಲೆ ಮಾಲಿನ್ಯ
ನಿಮ್ಮ ಜೀವನಕ್ಕೆ ನಾ ದೊರಕಿರುವುದು ನಿಮ್ಮ ಪುಣ್ಯ
ನನ್ನ ನೋಡಲು ನೀವು ಧನ್ಯ

ನನ್ನನ್ನು ಕರೆಯುವಿರಿ ನಿಸರ್ಗ ಮಾತೆ
ಕೊಂಚವೂ ಇಲ್ಲ ನನ್ನ ಬಗ್ಗೆ ಮಮತೆ
ನಿಮ್ಮ ದುರಾಸೆಗೆ ಬಗಿಯುವಿರಿ ನನ್ನ ಒಡಲು
ನಿಮ್ಮನ್ನು ಸಲಹಲು ಹೇಗೆ ನೀಡಲಿ ನನ್ನ ಮಡಿಲು

ಝರಿ ತೊರೆಯಾಗಿ ಹರಿದು ತೀರಿಸುವೆ ನಿಮ್ಮ ದಾಹ
ನನ್ನಲ್ಲೇಕೆ ನಿಮ್ಮ ಮೋಜು ಮಸ್ತಿಗಳ ಮೋಹ
ನಾ ಮುನಿದರೆ ಕಾಪಾಡುವುದಿಲ್ಲ ಯಾವ ದೈವ
ಇದ ನೀ ಅರಿತರೆ ಉಳಿಯುವುದು ಮನುಕುಲದ ಜೀವ.

- **ಬಸವರಾಜ ಕರುವಿನ**, ಬಸವನಾಳು.

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ 5.30 ರಿಂದ ರಾತ್ರಿ 12 ರವರೆಗೆ ಅಕೌಂಟ್ಸ್ / ಜಾಹೀರಾತು ವಿಭಾಗದಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ. ಸಂಪರ್ಕಿಸಿ : ಮಧ್ಯಾಹ್ನ 12ರ ನಂತರ ಕರೆಮಾಡಿ
08192-254736

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು & ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಗ್ಲಾಸ್ ಹೌಸ್ ಲೇಔಟ್, ಶಿವ-ಪಾರ್ವತಿ, ಜಯನಗರ, ಹೈಟೆಕ್ ಆಸ್ಪತ್ರೆ ಹಿಂಭಾಗ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಹಾಗೂ ಕಮರ್ಷಿಯಲ್ ಉತ್ತಮ ಬೆಲೆಯಲ್ಲಿ ದೊರೆಯುತ್ತವೆ. 30x40, 30x50, 40x60, 30x60, 40x50 ಈ ಅಳತೆ ಸೈಟುಗಳು ದೊರೆಯುತ್ತವೆ.
97315 12365

**TUITIONS**
IGCSE, ICSE, CBSE and State Board from class 5th to 12th MCC A Block
98444 92888

**ಬೇಸಿಕ್ + ಗ್ರಾಮರ್ ಸ್ಪೋಕನ್ ಇಂಗ್ಲಿಷ್ ತರಬೇತಿ**
ಎಷ್ಟೇ ಡಲ್ ಇದ್ರು ಅತ್ಯುತ್ತಮ ಫಲಿತಾಂಶ
20 ಮಕ್ಕಳಿಗೆ ಮಾತ್ರ ಪ್ರವೇಶ
ಮಿರಜ್‌ಕರ್ ಅವರಿಂದ ತರಬೇತಿ
ಮಿರಜ್‌ಕರ್ ಟ್ಯುಟೋರಿಯಲ್
90369 96243

**ನಮ್ಮಲ್ಲಿ ಪರಿಶುದ್ಧ ಮೇಕೆ ಹಾಲು ದೊರೆಯುತ್ತದೆ**
ಮೇಕೆ ಹಾಲು ಬೇಕಿದ್ದಲ್ಲಿ ಕೂಡಲೇ ಸಂಪರ್ಕಿಸಿ:-
ಹರೀಶ್ ಆಗ್ರೋ ಫಾರ್ಮ್
ರಾಮನಗರ ಗ್ರಾಮ, ಅರಸೀಕೆರೆ ಹೋಬಳಿ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.
73488 38888
63641 67777

**ಮಾರುವುದಿದೆ**
ಲೋಕಿಕೆರೆ ರೋಡ್‌ನಲ್ಲಿ 1 ಅಲಿನೇಷನ್ ಆಗಿರುವ 35x50 ಅಳತೆಯ ಮೂರು ಸೈಟ್‌ಗಳು ಅಕ್ಕ-ಪಕ್ಕದಲ್ಲಿದ್ದು, ಗೋಡೌನ್ ಕೂಡ ಇದೆ. ಇದೆಲ್ಲದಕ್ಕೂ ಕಾಂಪೌಂಡ್ ಇದ್ದು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
99863 31471

**ಸೈಟು ಮಾರಾಟಕ್ಕಿದೆ**
KHB ಲೇಔಟ್‌ನಲ್ಲಿ 50×80 ಅಳತೆಯ ಪಶ್ಚಿಮ ದಿಕ್ಕಿನಲ್ಲಿರುವ ಸೈಟ್ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ನೇರವಾಗಿ ಸೈಟ್ ಓನರ್‌ಗೆ ಸಂಪರ್ಕಿಸಿ.
63621 81509

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸಲ್ ಕಟ್ಟಲು ಹಾಗೂ ಇಡ್ಲಿ, ವಡ (ಅನುಭವವುಳ್ಳ) ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ
(ಮಹಿಳೆಯರಿಗೂ ಆದ್ಯತೆ)
70194 69302

**ಮನೆ ಮಾರಾಟಕ್ಕಿದೆ**
1828/A25,ಆಂಜನೇಯ ಬಡಾವಣೆ,18ನೇ ಕ್ರಾಸ್ ನಲ್ಲಿರುವ ಡುಪ್ಲೆಕ್ಸ್ (North Face), 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ (East Face) ವಾಸ್ತು ಪ್ರಕಾರ ಎಲ್ಲಾ ಅನುಕೂಲವಿರುವ fully furnished, ಬೋರ್ ವೆಲ್ & ಕಾರ್ಪೊರೇಶನ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕೆ ಇದೆ.
9008432505/9449805750

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
SV Marketing, Davanagere, P.B. Road. * ಆಟೋ ಡ್ರೈವರ್, * ಸೇಲ್ಸ್ ಎಕ್ಸಿಕ್ಯೂಟಿವ್, * ಅಂಗಡಿಯಲ್ಲಿ ಕೆಲಸ ಮಾಡುವವರು ಬೇಕಾಗಿದ್ದಾರೆ. ಸಂಪರ್ಕಿಸಿ :
63020 23451, 97434 37003

**ಟ್ಯಾಂಕರ್ ಬಾಡಿಗೆಗೆ**
ಟ್ರ್ಯಾಕ್ಟರ್ ಉತ್ತಮ ಕಂಡೀಷನ್ ಇರುವ 6000ಲೀ ಟ್ಯಾಂಕರ್ ಬಾಡಿಗೆಗಿದೆ ವಿಚಾರಿಸಿ.
99869 13794

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ವೃದ್ಧಾಶ್ರಮಕ್ಕಾಗಿ ಬಿಲ್ಡಿಂಗ್ ಬಾಡಿಗೆಗೆ ಬೇಕಾಗಿದೆ**
ದಾವಣಗೆರೆ ನಗರದಲ್ಲಿ ವೃದ್ಧಾಶ್ರಮಕ್ಕಾಗಿ ಗ್ರೌಂಡ್ ಫ್ಲೋರ್ ಬಿಲ್ಡಿಂಗ್ ಬಾಡಿಗೆಗೆ ಬೇಕಾಗಿದೆ. 50 ಜನಕ್ಕೆ ವಸತಿಯುತ ಅನುಕೂಲವಿರುವಂತಹ ಸುಸಜ್ಜಿತ ಬಿಲ್ಡಿಂಗ್ ಬೇಕಾಗಿದೆ. ಸಂಪರ್ಕಿಸಿ :
95380 24422

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಮನ್, ಸೇಲ್ಸ್ ಗರ್ಲ್ಸ್ ಮತ್ತು ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 01

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 28.04.24 ರಿಂದ 06.05.2024ರವರೆಗೆ
ಕಾಶಿ, ಅಯೋಧ್ಯ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ ಪ್ರವಾಸ ವಿಮಾನದಲ್ಲಿ
ಪ್ರಯಾಣ ಆಸಕ್ತಿ ಇರುವವರು ಕರೆ ಮಾಡಿ :
94485 33928, 90086 26473

## ಸಿಎಎ ವಿರುದ್ದ ಎಸ್‌ಡಿಪಿಐ ಪ್ರತಿಭಟನೆ



ದಾವಣಗೆರೆ, ಮಾ. 20- ಇಲ್ಲಿನ ಜೆ. ಇಮಾಂ ನಗರ ಸರ್ಕಲ್‌ನಲ್ಲಿ ಸೋಶಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾ ಸಮಿತಿ ವತಿಯಿಂದ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಸಿಎಎ ವಿರುದ್ಧ ಮೊನ್ನೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಜಿಲ್ಲಾ ಸಂಘಟನಾ ಪ್ರಧಾನ ಕಾರ್ಯದರ್ಶಿ ಫಯಾಜ್ ಅಹಮದ್, ಇದು ಕೇವಲ ಚುನಾವಣೆ ಗಿಮಿಕ್ ಆಗಿದೆ. ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದ ನಂತರ ಎಸ್‌ಬಿಐ ಬಿಡುಗಡೆ ಮಾಡಿದ ಚುನಾವಣಾ ಬಾಂಡ್‌ನ ವರದಿಯ ಭ್ರಷ್ಟಾಚಾರವನ್ನು ಮರೆಮಾಚಲು ಸಿಎಎ ಎಂಬ ಅಸಂವಿಧಾನಿಕ ಕಾನೂನನ್ನು ಜಾರಿ ಮಾಡಿ ದೇಶವನ್ನು ವಿಭಜನೆ ಮಾಡುವ ಕುತಂತ್ರಕ್ಕೆ ಕೈಹಾಕಿದೆ ಎಂದರು.

ಜಿಲ್ಲಾಧ್ಯಕ್ಷ ಯಾಹಿಯಾ ಮಾತನಾಡಿ, ಸಿಎಎ ಕಾನೂನಿನ ವಿರುದ್ಧ ಹೋರಾಟ ಮುಸ್ಲಿಮರ ಹೋರಾಟವಾಗದೆ. ಇದು ಜನಸಾಮಾನ್ಯರ ಹೋರಾಟ ವಾಗಬೇಕಿದೆ. ಏಕೆಂದರೆ ಬಿಜೆಪಿ ಧರ್ಮಾಧಾರಿತವಾಗಿ ಕಾನೂನುಗಳನ್ನು ರೂಪಿಸಿ ಸಂವಿಧಾನದ ಮೂಲ ಆಶಯಗಳನ್ನು ಬುಡಮೇಲು ಮಾಡುತ್ತಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಮೋಹಸಿನ್, ಜಿಲ್ಲಾ ಕಾರ್ಯದರ್ಶಿ ಮೊಹಮ್ಮದ್ ಅಜರುದ್ದೀನ್, ಜಿಲ್ಲಾ ಕೋಶಾಧಿಕಾರಿ ಎ. ಆರ್. ತಾಹೀರ್, ಅಶ್ರಫ್, ನವೀದ್ ಮತ್ತಿತರರು ಉಪಸ್ಥಿತರಿದ್ದರು.

## ಮಾ. 31ರಂದು ಬ್ಯಾಂಕ್‌ಗೆ ರಜೆ ಇಲ್ಲ: ಆರ್‌ಬಿಐ

**(1ನೇ ಪುಟದಿಂದ)** ಹೊಂದಿರುವ ಎಲ್ಲಾ ಏಜೆನ್ಸಿ ಬ್ಯಾಂಕ್‌ಗಳು ಹಣಕಾಸು ವರ್ಷದ ಕೊನೆ ದಿನ ತೆರೆದಿರಲಿದೆ ಎಂದು ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್ ಎಕ್ಸ್‌ನಲ್ಲಿ ಟ್ವೀಟ್ ಮೂಲಕ ಆರ್‌ಬಿಐ ಈ ನಿರ್ಧಾರದ ಬಗ್ಗೆ ಮಾಹಿತಿ ನೀಡಿದೆ.

ಇದಕ್ಕೂ ಮುನ್ನ ಆದಾಯ ತೆರಿಗೆ ಇಲಾಖೆಯು ಮಾರ್ಚ್ 29 ರಿಂದ ಮಾರ್ಚ್ 31 ರವರೆಗಿನ ದೀರ್ಘ ವೀಕೆಂಡ್ ಅನ್ನು ಬಾಕಿ ಉಳಿದಿರುವ ತೆರಿಗೆ ಸಂಬಂಧಿತ ಕೆಲಸವನ್ನು ಪರಿಗಣಿಸಿ ರದ್ದುಗೊಳಿಸಲಾಗಿದೆ ಎಂದು ತಿಳಿಸಿದೆ. ಮಾರ್ಚ್ 29 ಗುಡ್ ಫ್ರೈಡೇ ರಜಾ ದಿನವಾಗಿದೆ. ಮಾರ್ಚ್ 30 ಶನಿವಾರ, ಆದರೆ ಮಾರ್ಚ್ 31 ಭಾನುವಾರವಾಗಿದೆ.

# ಶುದ್ಧವಾಗಿ ಬಳಸಿದಲ್ಲಿ ಭಾಷೆ ಉಳಿದು ಬೆಳೆಯುತ್ತದೆ : ಹೆಚ್‌ಬಿಎಂ

ದಾವಣಗೆರೆ, ಮಾ.20- ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಬೇಕೆಂದರೆ ಶುದ್ಧವಾಗಿ ಬಳಸಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ತಾವು ದಿನನಿತ್ಯದ ಮಾತುಕತೆಗಳಲ್ಲಿ ಎಷ್ಟು ಶುದ್ಧವಾಗಿ ಭಾಷೆಯನ್ನು ಬಳಸುತ್ತಿದ್ದೇವೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಹಿರಿಯ ಪತ್ರಕರ್ತ ಎಚ್. ಬಿ. ಮಂಜುನಾಥ್ ಅಭಿಪ್ರಾಯ ಪಟ್ಟರು.

ಹರಿಹರದಲ್ಲಿ ನಡೆದ ಜಿಲ್ಲಾ 13ನೇ ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲಗೋಷ್ಠಿಯಲ್ಲಿ 'ಸುವರ್ಣ ಕರ್ನಾಟಕ ಸಂಭ್ರಮದಲ್ಲಿ ನಾಡು - ನುಡಿ ಹಾಗೂ ಸಾಹಿತ್ಯಿಕ ಸಾಧನೆಗಳು' ವಿಷಯವಾಗಿ ಅವರು ಮಾತನಾಡಿದರು.

ಕರ್ನಾಟಕವೆಂಬ ಹೆಸರಿನ ಪ್ರಾಚೀನತೆಯು ಮೂಲ ಮಹಾಭಾರತದ ಭೀಷ್ಮ ಪರ್ವದ 9ನೇ ಅಧ್ಯಾಯದ 59ನೇ ಶ್ಲೋಕದಲ್ಲೂ ಪ್ರಸ್ತಾಪವಾಗಿದೆ ಎಂದು ಸಂಶೋಧಕರು ಹೇಳಿದ್ದು, ತದನಂತರ 4ನೇ ಶತಮಾನದ ಶೂದ್ರಕ ಕವಿಯ ಮೃಚ್ಛಕಟಿಕ ನಾಟಕದಲ್ಲೂ ಅದೇ ಕಾಲಘಟ್ಟದ ವಿಷ್ಣುಧರ್ಮೋತ್ತರದಲ್ಲೂ 6ನೇ ಶತಮಾನದ ಶಿಲಪ್ಪಧಿಕಾರಂನಲ್ಲೂ 8ನೇ ಶತಮಾನದ ಮಾರ್ಕಂಡೇಯ ಪುರಾಣದಲ್ಲೂ, 9ನೇ ಶತಮಾನದ ವರಾಹಮಿಹಿರನ ಬೃಹತ್ ಸಂಹಿತೆಯಲ್ಲೂ, ಭಾಗವತ ಪುರಾಣ, ಮತಂಗ, ಜಯಕೀರ್ತಿ, ಕ್ಷೇಮೇಂದ್ರ, ಬಿಲ್ಹಣ, ಕಲ್ಹಣ, ಸೋಮದೇವರ ಗ್ರಂಥಗಳಲ್ಲೂ ಅತ್ಯಂತ ಪುರಾತನವಾಗಿ ಕರ್ನಾಟಕ ಅಥವಾ ಕರ್ನಾಟಕವೆಂಬ ಶಬ್ದದ ಪ್ರಸ್ತಾಪವಿದೆ.



20-07-1890ರ ವಿದ್ಯಾವರ್ಧಕ ಸಂಘದ ಸ್ಥಾಪನೆಯಿಂದ 01-11- 1973ರ ವರೆಗಿನ ಕರ್ನಾಟಕ ಏಕೀಕರಣ ಹಾಗೂ ನಾಮಕರಣದ ಸಂಕ್ಷಿಪ್ತ ವಿವರಗಳನ್ನು ನೀಡಿದರಲ್ಲದೇ ಕನ್ನಡಕ್ಕೆ ಬಂದ ಎಂಟು ಜ್ಞಾನಪೀಠ ಪ್ರಶಸ್ತಿಗಳಲ್ಲಿ ಆರು ಜ್ಞಾನಪೀಠ ಪ್ರಶಸ್ತಿಗಳು ಸುವರ್ಣ ಕರ್ನಾಟಕದ ಕಾಲಘಟ್ಟದಲ್ಲೇ ಬಂದಿರುವುದು ನಿಜಕ್ಕೂ ಸಾಹಿತ್ಯಿಕ ಸಾಧನೆಯ ಸಂಭ್ರಮ ಎಂದರು.

ನಮ್ಮ ಭಾಷೆಯ ಅವನತಿಗೆ ಇನ್ನಾರನ್ನೋ ಅಥವಾ ಇನ್ನಾವುದೇ ಭಾಷೆಯನ್ನೋ ದೂರವ ಅಥವಾ ಹೊಣೆಯಾಗಿಸುವ ಮೊದಲು ದಿನನಿತ್ಯದ ನಮ್ಮ ಭಾಷಾ ಬಳಕೆಯಲ್ಲಿ ನಾವೆಷ್ಟು ಶುದ್ಧವಾಗಿ, ಕಲಬೆರಕೆಯಿಲ್ಲದ ಕನ್ನಡವನ್ನು ಬಳಸುತ್ತಿದ್ದೇವೆ ಎಂಬುದನ್ನು ಪ್ರತಿನಿತ್ಯ ಆತ್ಮ ವಿಮರ್ಶೆ ಮಾಡಿಕೊಂಡು ನೋಡಿದಲ್ಲಿ ಅನವಶ್ಯಕವಾದ ಪರಭಾಷಾ ಪದಗಳ ಬಳಕೆ ಯತೇಷ್ಟವಾಗಿ ಕಂಡು ಬರುತ್ತಿದೆ. ಇದನ್ನು ಮೊದಲು ನಾವು ಪ್ರತಿಯೊಬ್ಬರೂ ವೈಯಕ್ತಿಕವಾಗಿ ಸರಿಪಡಿಸಿಕೊಂಡಲ್ಲಿ ನಮ್ಮ ಭಾಷೆ ಖಂಡಿತ ಉಳಿದು ಬೆಳೆಯುತ್ತದೆ ಎಂಬುದನ್ನು ಉದಾಹರಣೆಯ ಸಹಿತ ವಿವರಿಸಿದರು.

ಶಿಕ್ಷಣ ತಜ್ಞ ಡಾ.ಹೆಚ್.ವಿ. ವಾಮದೇವಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಗೋಷ್ಠಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ ಎಂಬ ವಿಷಯವಾಗಿ ಶ್ರೀಮತಿ ಸೀತಾ ಎಸ್.ನಾರಾಯಣ ವಿಷಯ ಮಂಡನೆ ಮಾಡಿದರು.

ಕನ್ನಡ ಶಾಲೆಗಳ ಸ್ಥಿತಿಗತಿ ಹಾಗೂ ಪರಿಹಾರ ಎಂಬ ವಿಷಯವಾಗಿ ಮಾತನಾಡಿದ ಹರಪನಹಳ್ಳಿಯ ಎಸ್‌ಯುಜೆಎಂ ಕಾಲೇಜಿನ ಪ್ರಾಚಾರ್ಯ ಹೆಚ್.ಮಲ್ಲಿಕಾರ್ಜುನ, ಪಾಲಕರಲ್ಲಿನ ಆಂಗ್ಲ ಭಾಷೆಯ ವ್ಯಾಮೋಹ ಮತ್ತು ಖಾಸಗೀಕರಣದ ನೆಪದಿಂದಾಗಿ ಕನ್ನಡ ಶಾಲೆಗಳ ಸಂಖ್ಯೆ ಕ್ಷೀಣಿಸುತ್ತಿವೆ ಎಂದರು.

ರಾಜ್ಯದಲ್ಲಿ 20 ಸಂಖ್ಯೆಗಿಂತ ಕಡಿಮೆ ಮಕ್ಕಳಿರುವ ಸುಮಾರು 16,783 ಶಾಲೆಗಳು ಇಂದು ಅಳಿವಿನಂಚಿಗೆ ಬಂದಿವೆ.

> **ವಿದ್ಯುತ್ ಸಂಪರ್ಕವಿಲ್ಲದ 7,144 ಶಾಲೆಗಳು, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಿಲ್ಲದ 220 ಶಾಲೆಗಳು, ಶೌಚಾಲಯವಿಲ್ಲದ 8,163 ಶಾಲೆಗಳು ಹಾಗೂ ಉತ್ತಮ ಆವರಣವಿಲ್ಲದ 22,626 ಶಾಲೆಗಳು ಮೂಲ ಸೌಲಭ್ಯಗಳಿಲ್ಲದೇ ಬಳಲುತ್ತಿವೆ.**
>
> **-ಹೆಚ್.ಮಲ್ಲಿಕಾರ್ಜುನ್, ಪ್ರಾಚಾರ್ಯರು, ಎಸ್‌ಯುಜೆಎಂ ಕಾಲೇಜು, ಹರಪನಹಳ್ಳಿ**

ಇದಕ್ಕೆ ಮೂಲ ಕಾರಣವೇ, ಶಿಕ್ಷಕರಿಗೆ ಆಧುನಿಕ ಬೋಧನೆಯ ಮಾಹಿತಿ ಇಲ್ಲದಿರುವುದು ಮತ್ತು ಬೋಧನೆಗಿಂತ ಅನ್ಯ ಕಾರ್ಯದಲ್ಲಿ ತೊಡಗುವುದು ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರಿ ನೌಕರರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿದರೇ ಕನ್ನಡ ಶಾಲೆ ಉಳಿಯಲಿದೆ ಎಂದ ಅವರು, ಸರ್ಕಾರಿ ಶಾಲೆಗಳ ಉಳುವಿಗಾಗಿ ಮತ್ತು ಮೂಲ ಸೌಕರ್ಯ ಕಲ್ಪಿಸಲು 20ಕ್ಕೂ ಅಧಿಕ ಸುಧಾರಣಾ ಕ್ರಮಗಳನ್ನು ವಿವರಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ, ಡಾ.ಜಿ.ಚಂದ್ರಶೇಖರ್, ಓ.ಬಿ.ರುದ್ರಗೌಡ್ರು ಉಪಸ್ಥಿತರಿದ್ದರು. ಸುಜಾತಮ್ಮ ರಾಜು ಸ್ವಾಗತಿಸಿದರು. ಬಿ.ಟಿ. ಗೀತಾ ಮಂಜು ಕಾರ್ಯಕ್ರಮ ನಿರೂಪಿಸಿದರು. ಜಿ.ಸಿದ್ದೇಶ್, ನಾಗವೇಣಿ, ದಾಗಿನಕಟ್ಟೆ ಪರಮೇಶಪ್ಪ ನಿರ್ವಹಿಸಿದ ಕಾರ್ಯಕ್ರಮದಲ್ಲಿ ವಂದನೆಗಳನ್ನು ಕೃಷ್ಣಮೂರ್ತಿ ನಾಯಕ ಸಮರ್ಪಿಸಿದರು.

# 25 ರಿಂದ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ



ದಾವಣಗೆರೆ,ಮಾ.20- ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯು ಇದೇ ದಿನಾಂಕ 25 ರಿಂದ ಆರಂಭವಾಗುತ್ತಿದ್ದು, ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವುದರೊಂದಿಗೆ ಪರೀಕ್ಷೆಯನ್ನು ಸುಗಮವಾಗಿ ನಡೆಸಿಕೊಡಲು ಎಲ್ಲಾ ಸಿದ್ದತೆ ಕೈಗೊಳ್ಳಲು ಜಿಲ್ಲಾಧಿಕಾರಿ ಡಾ. ಎಂ.ವಿ ವೆಂಕಟೇಶ್ ತಿಳಿಸಿದರು.

ನಗರದ ಗುರುಭವನದಲ್ಲಿ ಮೊನ್ನೆ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷಾ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ 166 ಸರ್ಕಾರಿ, 172 ಅನುದಾನಿತ, 134 ಅನುದಾನ ರಹಿತ ಸೇರಿ 472 ಪ್ರೌಢಶಾಲೆ ಗಳಿಂದ 11131 ಗಂಡು, 11130 ಹೆಣ್ಣು ಸೇರಿ 22261 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಜಿಲ್ಲೆಯಲ್ಲಿ 41 ಕೇಂದ್ರಗಳು ಸರ್ಕಾರಿ ಪ್ರೌಢಶಾಲೆ, 35 ಅನುದಾನಿತ, 6 ಅನುದಾನ ರಹಿತ ಪ್ರೌಢಶಾಲೆಗಳು ಸೇರಿ 82 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ತಾಲ್ಲೂಕುವಾರು ವಿವರದನ್ವಯ ಚನ್ನಗಿರಿ 16, ದಾವಣಗೆರೆ ಉತ್ತರ 14, ದಾವಣಗೆರೆ ದಕ್ಷಿಣ 17, ಹರಿಹರ 12, ಹೊನ್ನಾಳಿ 11 ಹಾಗೂ ಜಗಳೂರು ತಾಲ್ಲೂಕಿನ 12 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಒಟ್ಟು ಪರೀಕ್ಷಾ ಕೇಂದ್ರಗಳಲ್ಲಿ 40 ಗ್ರಾಮೀಣ, 42 ನಗರ, ಪಟ್ಟಣದ ಕೇಂದ್ರಗಳಾಗಿವೆ. ಪರೀಕ್ಷೆ ನಡೆಯುವ ಎಲ್ಲಾ ಕೇಂದ್ರಗಳಿಗೆ ಸಿಸಿಟಿವಿ ಅಳವಡಿಸಲಾಗುತ್ತಿದ್ದು, ಇದರಲ್ಲಿ 10 ಕೇಂದ್ರಗಳನ್ನು ಸೂಕ್ಷ್ಮ, ಅತೀಸೂಕ್ಷ್ಮ ಎಂದು ಗುರುತಿಸಿದ್ದು ಇಲ್ಲಿ ವಿಶೇಷ ಭದ್ರತೆ ಮತ್ತು ನಿಗಾವಹಿಸಲು ಸೂಚನೆ ನೀಡಿದರು.

ಪರೀಕ್ಷೆಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಮಾಡದೆ ವಿದ್ಯಾರ್ಥಿಗಳು ಯಾವುದೇ ಭಯದ ವಾತಾವರಣದಲ್ಲಿ ಪರೀಕ್ಷೆ ಬರೆಯದಂತೆ ಪ್ರಶಾಂತ ವಾತಾವರಣ ಕಲ್ಪಿಸಲು ಪರೀಕ್ಷಾ ಕೇಂದ್ರದ ಅಧೀಕ್ಷಕರು ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಗಳಿಗೆ ಪರೀಕ್ಷಾ ಮಾರ್ಗಸೂಚಿಗಳ ಬಗ್ಗೆ ಮಾಹಿತಿ ನೀಡಿ ಇಲ್ಲಿ ಯಾವುದೇ ಪರೀಕ್ಷಾ ಅವ್ಯವಹಾರ ನಡೆಯದಂತೆ ನೋಡಿಕೊಂಡು ಸುಗಮವಾಗಿ ಪರೀಕ್ಷೆ ನಡೆಸಬೇಕೆಂದು ಸೂಚನೆ ನೀಡಿ ಕೇಂದ್ರದ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗುತ್ತದೆ ಎಂದರು.

> **ಪ್ರಶ್ನೆ ಪತ್ರಿಕೆಗಳನ್ನು ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು ಒಟ್ಟು 30 ಮಾರ್ಗಗಳನ್ನು ಗುರುತಿಸಲಾಗಿದೆ. ಮಾರ್ಗದ ಅಧಿಕಾರಿಗಳು ಯಾವುದೇ ವಿಳಂಬಕ್ಕೆ ಅವಕಾಶ ನೀಡದೇ ಸಕಾಲದಲ್ಲಿ ತಲುಪಿಸಬೇಕು.**
>
> **- ಡಾ. ಎಂ.ವಿ. ವೆಂಕಟೇಶ್, ಜಿಲ್ಲಾಧಿಕಾರಿ**

ಮಾರ್ಚ್ 25 ರಂದು ಬೆಳಗ್ಗೆ 10.15 ರಿಂದ ಮ.1.30 ರ ವರೆಗೆ ಪ್ರಥಮ ಭಾಷೆ ಪರೀಕ್ಷೆ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಇಂಗ್ಲಿಷ್ ಎನ್.ಸಿ.ಇ.ಆರ್.ಟಿ, ಸಂಸ್ಕೃತ, ಮಾ.27 ರಂದು ಸಮಾಜ ವಿಜ್ಞಾನ, ಮಾ.30 ರಂದು ವಿಜ್ಞಾನ, ರಾಜ್ಯಶಾಸ್ತ್ರ, ಮಧ್ಯಾಹ್ನ 2 ರಿಂದ ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ, ಏ.2 ರಂದು ಗಣಿತ, ಸಮಾಜಶಾಸ್ತ್ರ, ಎಲಿಮೆಂಟ್ಸ್ ಆಫ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಏ.3 ರಂದು ಎಲಿಮೆಂಟ್ಸ್ ಆಫ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಏ.4 ರಂದು ತೃತೀಯ ಭಾಷೆ ಹಿಂದಿ, ಕನ್ನಡ, ಇಂಗ್ಲಿಷ್, ಉರ್ದು, ತುಳು, ಅರೆಬಿಕ್, ಸಂಸ್ಕೃತ, ಮತ್ತು ಏಪ್ರಿಲ್ 6 ರಂದು ದ್ವಿತೀಯ ಭಾಷೆ ಇಂಗ್ಲಿಷ್, ಕನ್ನಡ ವಿಷಯಗಳ ಪರೀಕ್ಷೆ ನಡೆಯಲಿದೆ.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಹೆಚ್ಚುವರಿ ರಕ್ಷಣಾಧಿಕಾರಿ ವಿಜಯಕುಮಾರ್ ಎಂ.ಸಂತೋಷ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಕೊಟ್ರೇಶ್, ಡಯಟ್ ಪ್ರಾಂಶುಪಾಲರಾದ ಗೀತಾ ಹಾಗೂ ಇತರರು ಉಪಸ್ಥಿತರಿದ್ದರು.

# ಮೂಲಭೂತ ಸೌಲಭ್ಯಕ್ಕೆ ವಸತಿ ರಹಿತರ ಹೋರಾಟ ಸಮಿತಿ ಆಗ್ರಹ

ದಾವಣಗೆರೆ,ಮಾ.20- ನಗರದಲ್ಲಿ ಸುಮಾರು 30 ಸಾವಿರ ಕುಟುಂಬಗಳಿಗೆ ವಾಸಿಸಲು ಸ್ವಂತ ವಸತಿ ಅಥವಾ ನಿವೇಶನಗಳಾಗಲೀ ಇರುವುದಿಲ್ಲ. ಹಲ ವಾರು ವರ್ಷಗಳಿಂದ ಈ ಬೇಡಿಕೆ ಇಟ್ಟಿದ್ದರೂ ಇದು ವರೆಗೆ ಮಂಜೂರು ಮಾಡಿರುವುದಿಲ್ಲ. ದೇಶದಲ್ಲಿ ಮನೆ ಇಲ್ಲದವರಿಗೆ 2022ರ ಒಳಗಾಗಿ ವಸತಿ ಕಲ್ಪಿಸುವುದಾಗಿ ಪ್ರಧಾನಿ ಮೋದಿ ಸಹ ಹೇಳಿದ್ದರು. ಆದರೆ ಇದುವರೆಗೂ ಆ ಕೆಲಸವಾಗಿಲ್ಲ. ಎಂದು ಸಿಪಿಐ (ಎಂ)ಪಕ್ಷದ ನೇತೃತ್ವದ ಜಿಲ್ಲಾ ನಿವೇಶನ ಮತ್ತು ವಸತಿ ರಹಿತರ ಹೋರಾಟ ಸಮಿತಿ ದೂರಿದೆ.

ಈ ಸಂಬಂಧ ಸಂಸದರಿಗೆ ಮನವಿ ಸಲ್ಲಿಸಿರುವ ಸಂಘವು ಅನೇಕ ಮೂಲಭೂತ ಸಮಸ್ಯೆಗಳ ಬಗ್ಗೆ ಗಮನಸೆಳೆದಿದೆ. ನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೂಲಿ ಕಾರ್ಮಿಕರಿದ್ದು ಅವರ ಚಿಕಿತ್ಸೆಗೆಂದೇ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇದ್ದಂತಹ ಸಂಜೆ ಕ್ಲಿನಿಕ್‌ಗಳನ್ನು ಮುಚ್ಚಲಾಗಿದೆ. ಅವನ್ನು ತಕ್ಷಣ ಪ್ರಾರಂಭಿಸಬೇಕು ಹಾಗೂ ನಗರ ಪ್ರಾಥಮಿಕ ಕೇಂದ್ರಗಳಲ್ಲಿ ಸೌಲಭ್ಯಗಳನ್ನು ಹೆಚ್ಚಿಸಬೇಕು.

ನೀರಿನ ಕಂದಾಯವನ್ನು ಕಡಿಮೆ ಮಾಡಬೇಕು. ನೀರಿನ ಶುದ್ಧಿಕರಣ ಘಟಕಗಳನ್ನು ಪಾಲಿಕೆಯೇ ನಿರ್ವಹಣೆ ಮಾಡಬೇಕು. ಸರ್ಕಾರಿ ಶಾಲೆಗಳನ್ನು ಉನ್ನತೀಕರಿಸುವ ಯೋಜನೆಗಳನ್ನು ರೂಪಿಸಿ ಸಂಪೂರ್ಣ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸುಸಜ್ಜಿತವಾದ ಗ್ರಂಥಾಲಯ ಗಳನ್ನು ಪ್ರತಿ ವಾರ್ಡ್‌ಗಳಲ್ಲಿ ಸ್ಥಾಪಿಸಬೇಕು.

ನಗರದಲ್ಲಿ ಉದ್ಯಾನವನಕ್ಕೆ ಮೀಸಲಿದ್ದ ಜಾಗವನ್ನು ಒತ್ತುವರಿ ಮಾಡಲಾಗಿದ್ದು, ಅಂತಹ ಜಾಗಗಳನ್ನು ತೆರವುಗೊಳಿಸಿ ಸಂಪೂರ್ಣವಾಗಿ ಉದ್ಯಾನವನಗಳನ್ನು ಅಭಿವೃದ್ಧಿ ಮಾಡಬೇಕು. ಪ್ರತೀ ವಾರ್ಡ್‌ಗಳಲ್ಲಿ ವ್ಯಾಯಾಮ ಶಾಲೆಗಳನ್ನು ಸ್ಥಾಪಿಸಬೇಕು. ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಗಳನ್ನು ಗುರುತಿಸಿ ಅವರಿಗೆ ಗುರುತಿನ ಚೀಟಿ ನೀಡಬೇಕು.

ಅಂಗನವಾಡಿಗಳ ಕೊರತೆಯಿದ್ದು, ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಮತ್ತು ಮಹಿಳೆಯರ ಹಿತದೃಷ್ಟಿಯಿಂದ ಅಂಗನವಾಡಿ ಸಂಖ್ಯೆಗಳನ್ನು, ಜನಸಂಖ್ಯಾ ಆಧಾರದಲ್ಲಿ ಹೆಚ್ಚಿಸಬೇಕು.

ಕೆಲವು ಬಡಾವಣೆಗಳಿಗೆ ಸರ್ಕಾರಿ ನಗರ ಸಾರಿಗೆ ವ್ಯವಸ್ಥೆ ಇರುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ, ಹಿರಿಯ ನಾಗರಿಕರಿಗೆ ಮತ್ತು ಅಂಗವಿಕಲರಿಗೆ ತೊಂದರೆಯಾಗಿದ್ದು ಅಂತಹ ಭಾಗಗಳಿಗೆ ಸಾರಿಗೆ ವ್ಯವಸ್ಥೆ ಮಾಡಬೇಕು ಎಂದು ಹೋರಾಟ ಸಮಿತಿ ಕಾರ್ಯದರ್ಶಿ ಕೆ.ಹೆಚ್.ಆನಂದರಾಜು ಒತ್ತಾಯಿಸಿದ್ದಾರೆ.

# ಅಭಿಮಾನಿಗಳ ಒತ್ತಾಯದಿಂದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಶತಸಿದ್ಧ

ದಾವಣಗೆರೆ, ಮಾ.20- ಲೋಕಸಭಾ ಚುನಾವಣೆ ಅಭ್ಯರ್ಥಿಯಾಗಿ ಜಿ.ಬಿ. ವಿನಯ್ ಕುಮಾರ್ ಅವರನ್ನು ಕಾಂಗ್ರೆಸ್ ಆಯ್ಕೆ ಮಾಡದೇ ಇದ್ದಲ್ಲಿ, ಕಾಂಗ್ರೆಸಿನ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆ ಅಭಿಮಾನಿಗಳು ಒತ್ತಾಯಿಸುತ್ತೇವೆ ಎಂದು ರಘು ದೊಡ್ಮನಿ ತಿಳಿಸಿದರು.

ಜಿ.ಬಿ. ವಿನಯ್ ಕುಮಾರ್ ಅವರನ್ನು ಕಡೆಗಣಿಸಿ ಶಾಮನೂರು ಕುಟುಂಬಕ್ಕೆ ಟಿಕೆಟ್ ಸೂಚಿಸಿದರೆ, ಪಕ್ಷದ ಮುಖಂಡರ ಅಸಮಾಧಾನದಿಂದ ಪಕ್ಷಕ್ಕೆ ಹಿನ್ನಡೆ ಆಗಬಹುದು ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು. ಜಿಲ್ಲೆಯ ಜನರ ಸಮಸ್ಯೆ ಅರಿತ ವಿನಯ್ ಕುಮಾರ್ ಅವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಹಿರಿಯ ಮುಖಂಡ ಕೆ. ಉಮೇಶ್, ಮಹಮ್ಮದ್ ಅಲ್ತಾಫ್ ಹುಸೇನ್, ಹೇಮಂತ್ ಕುಮಾರ್, ಇರ್ಫಾನ್, ಶಿವಕುಮಾರ್, ವಿಜಯಕುಮಾರ್, ಪರಶುರಾಮ್, ಮತ್ತು ಪ್ರಮುಖರು ಇದ್ದರು.

# ವಿಶ್ವಕರ್ಮ ಸಮಾಜದಿಂದ ಸಾಮೂಹಿಕ ಉಪನಯನ, ವಿವಾಹ ಮಹೋತ್ಸವ

ದಾವಣಗೆರೆ, ಮಾ.20- ವಿಶ್ವಕರ್ಮ ಸಮಾಜದಿಂದ ಏಪ್ರಿಲ್ 26ರಂದು ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ 41ನೇ ವರ್ಷದ, ಉಪನಯನ ಮತ್ತು ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗಿದೆ. ವಿವಾಹ ಮತ್ತು ಉಪನಯನ ಆಗ ಬಯಸುವರು ಮೊ: 9448127640, 9880342765 ಸಂಪರ್ಕಿಸಿ ಹೆಸರು ನೋಂದಾಯಿಸುವಂತೆ ಸಮಾಜದ ಅಧ್ಯಕ್ಷ ಬಸಾಪುರದ ಬಿ. ನಾಗೇಂದ್ರಚಾರ್ ತಿಳಿಸಿದ್ದಾರೆ.

# ಹರಪನಹಳ್ಳಿ : ಉಚ್ಚಂಗೆಮ್ಮ ದೇವಿ ಜಾತ್ರೆ



ಹರಪನಹಳ್ಳಿ, ಮಾ. 20 - ದಾವಣಗೆರೆ ಲೋಕಸಭೆ ಚುನಾವಣೆ ಬಿಜೆಪಿಯ ಅಭ್ಯರ್ಥಿ ಗಾಯತ್ರಿ ಜಿ.ಎಂ. ಸಿದ್ದೇಶ್ವರ ತಾಲ್ಲೂಕಿನ ಹಿರೇಮೇಗಳಗೆರೆ ಗ್ರಾಮದಲ್ಲಿ ನಡೆಯುತ್ತಿರುವ ಶ್ರೀ ಉಚ್ಚಂಗೆಮ್ಮ ದೇವಿಯ ಜಾತ್ರೆಯ ಪ್ರಯುಕ್ತ ಆಗಮಿಸಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಪಿ. ಮಹಾಬಲೇಶ್ವರ ಗೌಡ್ರು, ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರಕಾಶ್, ವಡ್ಡಿನಹಳ್ಳಿ ಮಂಜುನಾಥ, ಪೋತಲಗಟ್ಟೆ ತಿಮ್ಮಣ್ಣ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ರೇವಂತ್ ಪಾಟೀಲ್, ಮುಖಂಡ ಫಣಿಯಾಪುರ ಲಿಂಗರಾಜ, ರಾಗಿಮಸಲಾಡ ರೇವಣ್ಣ, ಕಲ್ಲಹಳ್ಳಿ ಸುರೇಶ್, ಬಿ,ಕೆ, ವಿಜಯ್ ಕುಮಾರ್, ಕ್ಯಾರಕಟ್ಟೆ ಶಿವಯೋಗಿ, ಬಸವರಾಜ ಕೆಂಚಪುರ, ಚಟ್ನಿಹಳ್ಳಿ ಜಂಬಣ್ಣ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕೌಶಲ್ಯ ತರಬೇತಿ

ದಾವಣಗೆರೆ, ಮಾ.20- ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಹಳೇ ತೋಳಹುಣಸೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜಿಲ್ಲೆಯಲ್ಲಿನ ಗ್ರಾಮೀಣ ಅಭ್ಯರ್ಥಿಗಳಿಗೆ ಉಚಿತ ಕೌಶಲ್ಯ ತರಬೇತಿ ಆಯೋಜಿಸಲಾಗಿದೆ. ಇದೇ ದಿನಾಂಕ 26ರಿಂದ ವಿದ್ಯುತ್ ಪಂಪ್‌ಸೆಟ್ ಮತ್ತು ಮೋಟಾರ್ ರಿವೈಂಡಿಂಗ್ ತರಬೇತಿ ನಡೆಯಲಿದೆ. ಮಹಿಳೆಯರಿಗೆ ಇದೇ ದಿನಾಂಕ 31ರಿಂದ ಬ್ಯೂಟಿ ಪಾರ್ಲರ್ ಮ್ಯಾನೇಜ್‌ಮೆಂಟ್ ತರಬೇತಿ ಏರ್ಪಡಿಸಲಾಗಿದೆ. ತರಬೇತಿಯು ಊಟ ಮತ್ತು ವಸತಿಯೊಂದಿಗೆ 30 ದಿನಗಳ ಕಾಲ ನಡೆಯಲಿದ್ದು, 18 ರಿಂದ 44 ವಯೋಮಿತಿಯ ಬಿಪಿಎಲ್ ಕಾರ್ಡ್ ಹೊಂದಿದ ಜಿಲ್ಲೆಯ ಆಸಕ್ತ ಅಭ್ಯರ್ಥಿಗಳು ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : 7975139332, 7019980484, 9964111314, 9483386143, 9538395817.



## ತಾರೇಹಳ್ಳಿಯಲ್ಲಿ ರಥೋತ್ಸವ

ಜಗಳೂರು, ಮಾ. 20 - ತಾಲ್ಲೂಕಿನ ತಾರೇಹಳ್ಳಿ ಗ್ರಾಮದಲ್ಲಿ ಶ್ರೀ ಲಕ್ಷ್ಮಿರಂಗನಾಥ ಸ್ವಾಮಿ ಮಹಾರಥೋತ್ಸವವು ಇಂದು ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ನೆರವೇರಿತು.

# ಕಾರ್ಯಕರ್ತರನ್ನು ಮರೆತ ಸಿಎಂ : ದುಗ್ಗಪ್ಪ

ದಾವಣಗೆರೆ, ಮಾ. 20 - ರಾಜ್ಯ ಕಾಂಗ್ರೆಸ್ ಪಕ್ಷ ನಿಗಮ ಮಂಡಳಿಗಳ ಅಧ್ಯಕ್ಷರ ಪಟ್ಟಿ ಬಿಡುಗಡೆ ಮಾಡಿದ್ದು, ಇದರಲ್ಲಿ ಮಾಜಿ ಹಾಗೂ ಹಾಲಿ ಶಾಸಕರು, ಒಮ್ಮೆ ಅಧಿಕಾರ ಪಡೆದವರು, ಅಧಿಕಾರದಲ್ಲಿರುವವರ ಹೆಸರುಗಳೇ ಹೆಚ್ಚಾಗಿವೆ. ಪಕ್ಷಕ್ಕಾಗಿ ಸುಮಾರು 50 ವರ್ಷಗಳಿಂದ ಸೇವೆ ಸಲ್ಲಿಸಿರುವ ನಿಷ್ಠಾವಂತ ಕಾರ್ಯಕರ್ತರ ಹೆಸರುಗಳು ಕಣ್ಮರೆಯಾಗಿವೆ ಎಂದು ಕೆಪಿಸಿಸಿ ಸದಸ್ಯ ಹೆಚ್. ದುಗ್ಗಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಾರ್ಯಕರ್ತರೇ ಪಕ್ಷದ ಬೆನ್ನೆಲುಬು. ಈ ಹಿಂದೆ ಕಾಂಗ್ರೆಸ್ ಪಕ್ಷದ ಹೀನಾಯ ಸೋಲಿಗೆ ಕಾರ್ಯಕರ್ತರನ್ನು ಕಡೆಗಣಿಸಿದ್ದೇ ಕಾರಣವಾಗಿದೆ. ಈಗಲೂ ಕಾರ್ಯಕರ್ತರನ್ನು ಕಡೆಗಣಿಸಿದರೆ ಮುಂಬರುವ ಚುನಾವಣೆಯನ್ನು ಎದುರಿಸುವುದು ಕಷ್ಟವಾಗುತ್ತದೆ. ಪಕ್ಷದಲ್ಲಿ ವಂಶ-ಪರಂಪರೆ ಸಂಸ್ಕೃತಿ ಈಗಲೂ ಹೆಚ್ಚಾಗುತ್ತಿದೆ. ಅಧಿಕಾರದಲ್ಲಿದ್ದವರ ಮಕ್ಕಳು, ಅಳಿಯ, ಮೊಮ್ಮಕ್ಕಳು ಹೀಗೆ ಅವರ ವಂಶದವರಿಗೆ ಟಿಕೆಟ್ ಕೊಡಿಸಲು ಬಹುತೇಕ ಪೈಪೋಟಿ ನಡೆಯುತ್ತಿದೆ ಎಂದು ಅವರು ದೂರಿದ್ದಾರೆ.

ಪಕ್ಷ ಅಧಿಕಾರದಲ್ಲಿ ಇಲ್ಲದ ಸಮಯದಲ್ಲಿ ದಾವಣಗೆರೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ 75ನೇ ಹುಟ್ಟುಹಬ್ಬದ ಅಮೃತ ಮಹೋತ್ಸವವನ್ನು ಸಿದ್ಧರಾಮೋತ್ಸವವನ್ನಾಗಿ ಮಾಡಿ, ದಾವಣಗೆರೆ ಕಾರ್ಯಕರ್ತರು ಹತ್ತಾರು ಲಕ್ಷ ಜನರನ್ನು ಸೇರಿಸಿದ್ದರು. ರಾಜ್ಯದ 7 ಕೋಟಿ ಜನ ಮತ ಹಾಕಿ ಗೆಲ್ಲಿಸಿ, ಪಕ್ಷವನ್ನು ಸಿದ್ದರಾಮಯ್ಯನವರನ್ನು ಅಧಿಕಾರಕ್ಕೆ ತರಲು ಈ ಸಿದ್ದರಾಮೋತ್ಸವವೇ ಕಾರಣವಾಯಿತು. ಕಾಂಗ್ರೆಸ್ ಪಕ್ಷ ಹೀನಾಯ ಸ್ಥಿತಿಯಲ್ಲಿದ್ದಾಗ ಸಿದ್ದರಾಮೋತ್ಸವ ಕಾರ್ಯಕ್ರಮ ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ತುಂಬಿತು. ಆದರೆ ಅವರು ಅಧಿಕಾರಕ್ಕೆ ಬಂದ ಮೇಲೆ ತಮ್ಮನ್ನು ಅಧಿಕಾರಕ್ಕೆ ತಂದ ದಾವಣಗೆರೆ ಕಾರ್ಯಕರ್ತರನ್ನೇ ಮರೆತಿದ್ದಾರೆ ಎಂದು ಅಸಹನೆ ವ್ಯಕ್ತಪಡಿಸಿದ್ದಾರೆ.

# ನಗರದಲ್ಲಿ 23ಕ್ಕೆ ವೈದ್ಯಕೀಯ ಶಿಬಿರ

ದಾವಣಗೆರೆ, ಮಾ. 20- ಶ್ರೀ ಭಗವಾನ್ ಮಹಾವೀರ್ ಜೈನ್ ಹಾಸ್ಪಿಟಲ್ ವತಿಯಿಂದ ನಾಡಿದ್ದು ದಿನಾಂಕ 23ರ ಶನಿವಾರ ಬೆಳಿಗ್ಗೆ 8.30 ರಿಂದ ಸಂಜೆ 4ರ ವರೆಗೆ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆಯನ್ನು ಶ್ರೀ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ನಡೆಸಲಾಗುವುದು.

ಆಸ್ಪತ್ರೆಯು ಎರಡು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದ ಸಂದರ್ಭದಲ್ಲಿ ಈ ವಿಶೇಷ ವೈದ್ಯಕೀಯ ಮೆಗಾ ಶಿಬಿರವನ್ನು ಏರ್ಪಡಿಸಲಾಗಿದೆ.

ತಜ್ಞ ವೈದ್ಯ ಡಾ. ಎನ್. ಅಭಿರಾಮ್, ಕಿವಿ, ಮೂಗು ಗಂಟಲು ತಜ್ಞ ಡಾ. ತುಳಸಿನಾಯ್ಕ, ಸ್ತ್ರೀರೋಗ ತಜ್ಞರಾದ ಡಾ. ಕೆ.ಜಿ.ಎಂ. ಪ್ರೇಮಲೀಲಾ, ಆರ್ಥೋಪೆಡಿಕ್ ವಿಭಾಗದ ನುರಿತ ವೈದ್ಯರುಗಳು ಆರೋಗ್ಯ ತಪಾಸಣೆ ನಡೆಸುವರು.

ವಿವರಕ್ಕೆ ಸಂಪರ್ಕಿಸಿ : 08192-470872, 96060 48421, 96060 48422, 96060 48423

# ಪಿಯುಸಿ : 12755 ವಿದ್ಯಾರ್ಥಿಗಳು ಹಾಜರು

ದಾವಣಗೆರೆ, ಮಾ. 20 - ಜಿಲ್ಲೆಯಲ್ಲಿ ಇಂದು ನಡೆದ ದ್ವಿತೀಯ ಪಿಯುಸಿ ಸಮಾಜಶಾಸ್ತ್ರ, ಕಂಪ್ಯೂಟರ್ ಸೈನ್ಸ್ ಮತ್ತು ಎಲೆಕ್ಟ್ರಾನಿಕ್ಸ್ ವಿಷಯದ ಪರೀಕ್ಷೆ ನಡೆದಿದ್ದು 12755 ವಿದ್ಯಾರ್ಥಿಗಳು ಹಾಜರಾಗಿದ್ದರು. ಸಮಾಜಶಾಸ್ತ್ರ ವಿಷಯ ದಲ್ಲಿ 4353 ವಿದ್ಯಾರ್ಥಿಗಳು ಹಾಜರಾಗಿದ್ದರು. ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ 1736 ವಿದ್ಯಾರ್ಥಿ ಗಳು ಪರೀಕ್ಷೆಗೆ ಹಾಜರಾಗಿದ್ದರು. ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ 6 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

# ಗಿರೀಶ್ ನೇಮಕ



ದಾವಣಗೆರೆ, ಮಾ. 20 - ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ದಾವಣಗೆರೆ ಜಿಲ್ಲೆಗೆ ಸದಸ್ಯರನ್ನಾಗಿ ಎಸ್. ಎಸ್. ಗಿರೀಶ್ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶಿಸಿದೆ.


**WANTED**

Works Manager for Hadadi Road Rranch
Experience - 3 years
Sales Manager for CHETAK P.B. Road
Experience - 3 years
Mail resume jainmotor@gmail.com
Walk in interview
**JAIN BAJAJ**
P.B. Road, Davangere. Mobile : 81050 04554



॥ ಶ್ರೀ ಸೂಪಾರ್ಶ್ವನಾಥಾಯ ನಮಃ ॥
ಶ್ರೀ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ
**ಉಚಿತ ವೈದ್ಯಕೀಯ ಶಿಬಿರ**
ಆತ್ಮೀಯರೇ,
ನಮ್ಮ ಆಸ್ಪತ್ರೆಯು ಎರಡು ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಸಂದರ್ಭದಲ್ಲಿ ವಿಶೇಷ ವೈದ್ಯಕೀಯ ಮೆಗಾ ಶಿಬಿರವನ್ನು ಖ್ಯಾತ ವೈದ್ಯರೊಂದಿಗೆ ಏರ್ಪಡಿಸಲಾಗಿದೆ.
ಜನರಲ್ ಮೆಡಿಸಿನ್
**ಡಾ. ಅಭಿರಾಮ್ ಎನ್**
ಮಾಜಿ ಅಪೋಲೋ ಬಿಜಿಎಸ್ ರಿಜಿಸ್ಟ್ರಾರ್
MBBS, MD (ಇಂಟರ್ನಲ್ ಮೆಡಿಸಿನ್) ಫಿಜಿಷಿಯನ್ ಮತ್ತು ಮಧುಮೇಹ ತಜ್ಞರು
ಉಚಿತ ಸಮಾಲೋಚನೆ, ಉಚಿತ ECG, ಉಚಿತ RBS/PPBS/FBS
ಎಂಡೋಸ್ಕೋಪಿಯಲ್ಲಿ 50% ರಿಯಾಯಿತಿ
ಕಿವಿ, ಮೂಗು, ಗಂಟಲಿನ ಸರ್ಜನ್
**ಡಾ.ಡಿ.ತುಳಸಿ ನಾಯ್ಕ**
MBBS, MS, DLO, ENT, ADAI
ಉಚಿತ ಸಮಾಲೋಚನೆ, ಉಚಿತ ಶ್ರವಣ ಸಾಧನ ಯಂತ್ರಗಳು
ಸ್ತ್ರೀರೋಗತಜ್ಞರು
**ಡಾ.ಕೆ.ಜಿ.ಎಂ. ಪ್ರೇಮಲೀಲಾ**
MBBS, MD (OB/GY), GASRH (USA)
ಉಚಿತ ಸಮಾಲೋಚನೆ, ಸ್ಕ್ಯಾನಿಂಗ್ ಮೇಲೆ 50% ರಿಯಾಯಿತಿ
ಆರ್ಥೋಪೆಡಿಕ್ ಸರ್ಜನ್
ಉಚಿತ ಸಮಾಲೋಚನೆ, ಎಕ್ಸ್-ರೇ ಮೇಲೆ 50% ರಿಯಾಯಿತಿ, ಉಚಿತ ವಾಕಿಂಗ್ ಸ್ಟಿಕ್
ಶನಿವಾರ 23-03-2024 ಸಮಯ : ಬೆಳಗ್ಗೆ 8:30 ರಿಂದ ಸಂಜೆ 4:00 ರವರೆಗೆ.
@ ಶ್ರೀ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ, 47/1, AVK, ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577 002
Ph : 08192-470872, 9606048423, 9606048421, 9606048422
ದಯವಿಟ್ಟು 22-03-2024 ರೊಳಗೆ 9606048423 ಈ ನಂಬರ್‌ಗೆ ನೋಂದಾಯಿಸಿ


# ಚುನಾವಣೆ ಸಭೆ, ಮೆರವಣಿಗೆ ನಿಷೇಧ ಮಾಡಿದರೆ ಒಳಿತು

**ಓದುಗರ ಪತ್ರ**

ಮಾನ್ಯರೇ,

ಹವಾಮಾನ ವರದಿಯ ಪ್ರಕಾರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದಲ್ಲಿ 40% ಬಿಸಿಲಿಗಿಂತ ಹೆಚ್ಚಾಗಿ ಬಿಸಿಗಾಳಿ ಬೀಸುವುದರಿಂದ ಬ್ರೈನ್ ಸ್ಟ್ರೋಕ್ ಆಗಿ ಸಾಯುವ ಸಾಧ್ಯತೆಗಳು ಇವೆ ಎನ್ನುವುದು ತಜ್ಞರ ಅಭಿಪ್ರಾಯ. ಜನರ ಆರೋಗ್ಯದ ದೃಷ್ಟಿಯಿಂದ ತಜ್ಞರು ಬೆಳಿಗ್ಗೆ 11 ರಿಂದ 4 ಗಂಟೆವರೆಗೆ ಬಿರು ಬಿಸಿಲಿನಲ್ಲಿ ಓಡಾಡಬಾರದೆಂಬ ಸೂಚನೆ ನೀಡಿದ್ದಾರೆ.

ಪ್ರಸ್ತುತ ಲೋಕಸಭೆ ಚುನಾವಣೆ ಬಿರುಬಿಸಿಲಿನಲ್ಲಿ ನಡೆಯುತ್ತಿರುವುದರಿಂದ ಅದರ ಪ್ರಚಾರಕ್ಕಾಗಿ ಬೃಹತ್ ಬಹಿರಂಗ ಸಭೆಗಳು, ಬೀದಿ ಮೆರವಣಿಗೆಗಳು ಹೆಚ್ಚಾಗುತ್ತವೆ. ಆದರೆ ವಿಪರ್ಯಾಸವೆಂದರೆ ಚುನಾವಣೆ ಪ್ರಚಾರಕ್ಕಾಗಿ ಹೆಚ್ಚು ಭಾಗವಹಿಸುವವರು ಬಡವರು. ಆದ್ದರಿಂದ ಚುನಾವಣೆಯ ಮೆರವಣಿಗೆ, ಸಭೆಗಳನ್ನು ದಯವಿಟ್ಟು ನಿಷೇಧ ಮಾಡಬೇಕು. ಇಲ್ಲವೆ ಮೊಟಕುಗೊಳಿಸುವುದು ಉತ್ತಮ. ಪ್ರಚಾರ ಮಾಡಲೇಬೇಕು ಎನ್ನುವಂತಿದ್ದರೆ ಈಗಾಗಲೇ ತಾಂತ್ರಿಕವಾಗಿ ಸಾಕಷ್ಟು ಜನ ಮುಂದುವರೆದಿದ್ದು ಸಾಮಾಜಿಕ ಮಾಧ್ಯಮ, ಟಿ.ವಿ. ಮೊಬೈಲ್‌ಗಳನ್ನು ಬಳಸಿಕೊಂಡು ಪ್ರಚಾರ ಮಾಡಬಹುದಲ್ಲವೇ?. ಇದನ್ನು ಮನಗಂಡು ಸುಪ್ರೀಂ ಕೋರ್ಟ್ ಎಲೆಕ್ಷನ್ ಕಮೀಷನ್ ಮತ್ತು ರಾಜಕೀಯ ಪಕ್ಷಗಳಿಗೆ ಸಭೆ, ಪ್ರಚಾರಗಳನ್ನು ಬಿಸಿಲಿನಲ್ಲಿ ಮಾಡದಂತೆ ನಿರ್ದೇಶನ ನೀಡಲಿ.

ಅಲ್ಲದೆ ಚುನಾವಣೆಗೆ ನಿಲ್ಲುವ ಎಲ್ಲಾ ಪಕ್ಷದ ಅಭ್ಯರ್ಥಿಗಳು ಜನರಿಗೆ ಈಗಾಗಲೆ ಹತ್ತಾರು ವರ್ಷಗಳಿಂದ ಪರಿಚಯವಿರುವುದರಿಂದ ಈ ಅಬ್ಬರದ ಸಭೆಗಳ, ಪ್ರಚಾರದ ಅವಶ್ಯಕತೆ ಇರುವುದೇ? ಅಲ್ಲದೆ ಗೆಲುವಿಗಾಗಿ ಮನೆ ಮನೆಗಳಿಗೆ ಹೋಗಿ ಹಣ, ವಸ್ತುಗಳ ಆಮಿಷ ಒಡ್ಡುವ ಪ್ರಕ್ರಿಯೆ ಅಪರಾಧವಾದ್ದರಿಂದ ಇದನ್ನೂ ನಿಲ್ಲಿಸಬೇಕು.

ಜಾರ್ಜ್ ಬರ್ನಾಡ್ ಷಾ ಪ್ರಕಾರ 'ಚುನಾವಣೆ ರಕ್ತಪಾತ ಯುದ್ಧ ಅಷ್ಟೆ, ಯುದ್ಧದ ಕೆಡುಕುಗಳೆಲ್ಲವೂ ಚುನಾವಣೆಗಳಲ್ಲಿರುತ್ತವೆ'. ಹಾಗಾಗಿ ಚುನಾವಣೆಗೆ 20, 30 ಕೋಟಿ ಹಣ ಖರ್ಚು ಮಾಡಿದರೆ ಆ ಹಣವನ್ನು ಪುನಃ ಗಳಿಸಲು, ಭ್ರಷ್ಟಾಚಾರಕ್ಕೆ ಚುನಾವಣೆಯೇ ಮೂಲವಾಗುವುದಿಲ್ಲವೆ? ಇದನ್ನು ಅಭ್ಯರ್ಥಿಗಳು, ರಾಜಕೀಯ ಪಕ್ಷಗಳು ಮತ್ತು ಪ್ರಜ್ಞಾವಂತ ಮತದಾರರು ದೇಶದ ಹಿತದೃಷ್ಟಿಯಿಂದ ವಿರೋಧಿಸಬೇಕು. ಆಗ ಮಾತ್ರ ಶ್ರೀಮಂತರಲ್ಲದೆ ಜನಸಾಮಾನ್ಯರೆಲ್ಲರೂ ಚುನಾವಣೆಗೆ ಸ್ಪರ್ಧಿಸಲು ಸಾಧ್ಯವಾಗುತ್ತದೆ. ಸರಳವಾಗಿ ಚುನಾವಣೆ ನಡೆದರೆ ಮಾತ್ರ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯ ನಿಜವಾಗಿಯೂ ಈಡೇರಿದಂತಾಗುತ್ತದೆ.

**- ಶಿವನಕೆರೆ ಬಸವಲಿಂಗಪ್ಪ.**
ದಾವಣಗೆರೆ.



## ಸಂಭ್ರಮದ ಶ್ಯಾಬನೂರು ಶ್ರೀ ಆಂಜನೇಯ ಸ್ವಾಮಿ ರಥೋತ್ಸವ

ದಾವಣಗೆರೆ - ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ರಥೋತ್ಸವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ಮುಂಜಾನೆ ವೈಭವದಿಂದ ನೆರವೇರಿತು.

# ಸ್ನೇಹ ಮಹಿಳಾ ಬಳಗದಿಂದ ಸಾಧಕರಿಗೆ ಗೌರವ



ದಾವಣಗೆರೆ, ಮಾ. 20- ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಡಾ. ಸದ್ಯೋಜಾತ ಸ್ವಾಮೀಜಿಯವರ ಹಿರೇಮಠದ ಸಭಾಂಗಣದಲ್ಲಿ ಸ್ನೇಹ ಮಹಿಳಾ ಬಳಗದ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ಸಾಧಕಿಯರಿಗೆ ಗೌರವ ಸಮರ್ಪಿಸಲಾಯಿತು.

ಸ್ನೇಹ ಮಹಿಳಾ ಬಳಗದ ಕಾರ್ಯಕರ್ತೆಯರು ಯಶಸ್ವೀ ಮಹಿಳೆ ಎನಿಸಿಕೊಂಡಿರುವ ಅನ್ನಪೂರ್ಣಮ್ಮ ಹಾಗೂ ನಂದಾ ಅಶೋಕ ಅಕ್ಕಿ ಅವರನ್ನು ಇದೇ ವೇಳೆ ಸೀರೆ, ತಾಂಬೂಲ ನೀಡಿ ಗೌರವಿಸಿದರು.

ಇದೇ ವೇಳೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಂಸ್ಥಾಪಕ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ಮಹಿಳೆ ಎಂಬ ಬಲವೇ ಪುರುಷನಿಗೆ ಶಕ್ತಿ ತುಂಬುವ ಮಹಾ ಚೈತನ್ಯ. ವಿವಿಧ ಕ್ಷೇತ್ರಗಳಲ್ಲಿ ಮಹಿಳೆ ತನ್ನದೇ ಆದ ಕೊಡುಗೆ ನೀಡುತ್ತಾ ಬಂದಿದ್ದು, ಪುರುಷ ಮತ್ತು ಮಹಿಳೆ ಸಮನಾಗಿ ಬೆಳೆಯುತ್ತಿರುವುದನ್ನು ನಾವು ಕಾಣುತ್ತೇವೆ ಎಂದರು.

ಭಾರತೀಯ ಕೃಷಿಯಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸಿದ್ದಾರೆ. ಕರುಣಾ ಜೀವ ಕಲ್ಯಾಣ ಟ್ರಸ್ಟ್ ಮತ್ತು ಸ್ನೇಹ ಮಹಿಳಾ ಬಳಗದ ಸಹಯೋಗದಲ್ಲಿ ಮಹಿಳೆಯರಿಗೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರಲಾಗಿದೆ. ಇದೀಗ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ದಾನಿಗಳ ನೆರವಿನಿಂದ ನೂರಾ ಐವತ್ತು ಸೈಕಲ್ ಗಳನ್ನು ಹಂತ ಹಂತವಾಗಿ ವಿತರಣೆ ಮಾಡುತ್ತಾ ಬರಲಾಗಿದ್ದು, ಇಂದು ಸಹ ಐವತ್ತು ಸೈಕಲ್ ಗಳನ್ನು ವಿತರಣೆ ಮಾಡಿರುವುದಾಗಿ ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸ್ನೇಹ ಮಹಿಳಾ ಬಳಗದ ಗೌರವಾಧ್ಯಕ್ಷರಾದ ಮಂಜುಳಾ ಬಸವಲಿಂಗಪ್ಪ ಅವರು, ಸ್ನೇಹ ಮಹಿಳಾ ಬಳಗ ಮತ್ತು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಅನೇಕ ಸೇವಾ ಕಾರ್ಯಗಳನ್ನು ನಡೆಸುತ್ತಾ ಬಂದಿದೆ. ಆರೋಗ್ಯ, ಶಿಕ್ಷಣ, ಪರಿಸರ, ಸ್ವಾವಲಂಬಿಗೆ ಸಂಬಂಧ ಪಟ್ಟ ಕಾರ್ಯಕ್ರಮಗಳು, ಬಡವರಿಗೆ ಧನ ಸಹಾಯ, ವಸ್ತುಗಳ ರೂಪದಲ್ಲಿ ಸಹಾಯ ಮಾಡುವ ಪರಿಪಾಠವನ್ನು ಬೆಳೆಸಿಕೊಂಡು ಬಂದಿರುವುದು ಶ್ಲಾಘನೀಯ ಎಂದರು.

ಬಳಗದ ಅಧ್ಯಕ್ಷೆ ಶೋಭಾ ರವಿ ಅಧ್ಯಕ್ಷತೆ ವಹಿಸಿದ್ದರು. ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ಪ್ರೊ. ಬಸವರಾಜ್, ಬಳಗದ ಪದಾಧಿಕಾರಿಗಳಾದ ತುಳಸಿ ಮಹೇಶ್, ಸುವರ್ಣಾ ದೊಗ್ಗಳ್ಳಿ, ಮಂಜುಳಾ ನಿಂಗಪ್ಪ, ನಾಗರತ್ನ, ಚೈತ್ರಾ ಮೋಹನ್ ಮತ್ತಿತರರು ಭಾಗವಹಿಸಿದ್ದರು.




ಕೆಎಂಡಿಸಿ (ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ)ಗೆ ನಾಮ ನಿರ್ದೇಶನಗೊಂಡಿರುವ ದಾವಣಗೆರೆ ಜಿಲ್ಲಾ ವಕ್ಫ್ ಸಲಹಾ ಸಮಿತಿ ಛೇರ್ಮನ್, ಆತ್ಮೀಯರೂ ಆಗಿರುವ

**ಶ್ರೀ ಮೊಹಮ್ಮದ್ ಸಿರಾಜ್** ಅಣ್ಣನವರಿಗೆ

**ಹೃದಯಪೂರ್ವಕ ಅಭಿನಂದನೆಗಳು.**

ಇವರ ನಾಮನಿರ್ದೇಶನಕ್ಕೆ ಕಾರಣಕರ್ತರಾದ ಕರ್ನಾಟಕ ಸರ್ಕಾರ ಅಲ್ಪಸಂಖ್ಯಾತರ ಮತ್ತು ವಸತಿ ಸಚಿವರಾದ ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್ ಅವರಿಗೆ, ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ರಾಜ್ಯಾಧ್ಯಕ್ಷರಾದ ಶ್ರೀ ಕೆ. ಅಬ್ದುಲ್ ಜಬ್ಬಾರ್ ಸಾಬ್, ಎಂಎಲ್‌ಸಿ ಇವರಿಗೆ , ರಾಜ್ಯ ವಕ್ಫ್ ಬೋರ್ಡ್ ಛೇರ್ಮನ್ ಆದ ಶ್ರೀ ಕೆ. ಅನ್ವರ್ ಬಾಷ, ರವರಿಗೆ

**ಹೃದಯಪೂರ್ವಕ ಧನ್ಯವಾದಗಳು.**

ಇವರ ಕಾರ್ಯ ವೈಖರಿಯನ್ನು ಗುರುತಿಸಿ ಹೊಸ ಜವಾಬ್ದಾರಿ ನೀಡಿದ ಎಲ್ಲಾ ಮುಖಂಡರಿಗೂ ಧನ್ಯವಾದಗಳು, ವಿಶೇಷವಾಗಿ ಸದಾ ಇವರ ಜೊತೆಯಲ್ಲಿದ್ದ ಹಿತೈಷಿಗಳಿಗೆ ಹೃದಯಪೂರ್ವಕ ಧನ್ಯವಾದಗಳು.

ಶುಭಕೋರುವವರು :

**ಸೈಯದ್ ಆಸಿಫ್ ಜುನೈದಿ**

ಕಾರ್ಯದರ್ಶಿ ಅಂಜುಮನ್ 'ಎ' ಇಸ್ಲಾಮಿಯ ಹರಿಹರ.

ಸದಸ್ಯರು, ದಾವಣಗೆರೆ ಜಿಲ್ಲಾ ವಕ್ಫ್ ಸಲಹಾ ಸಮಿತಿ, ದಾವಣಗೆರೆ.

# ನಾನೇ 5 ವರ್ಷ ಸಿಎಂ ಎಂದು ಹೇಳಲಿ

### ಸಿದ್ದರಾಮಯ್ಯಗೆ ಅಶೋಕ್ ಸವಾಲು

ಬೆಂಗಳೂರು, ಮಾ. 20 - ತಮ್ಮ ಕಾಂಗ್ರೆಸ್ ಪಕ್ಷದವರೇ ಟೀಕಿಸುತ್ತಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗದ ಸಿದ್ದರಾಮಯ್ಯ ಕರ್ನಾಟಕ ಕಂಡ ಅತ್ಯಂತ ದುರ್ಬಲ, ಅಸಹಾಯಕ ಮುಖ್ಯಮಂತ್ರಿ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಕಾಂಗ್ರೆಸ್‌ನ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ತಮ್ಮ ಮೇಲೆ ಪದೇ ಪದೇ ವಾಗ್ದಾಳಿ ನಡೆಸಿದರೂ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಾಗ ದಷ್ಟು, ಕನಿಷ್ಠ ಪಕ್ಷ ಪ್ರತ್ಯುತ್ತರ ಕೂಡ ನೀಡಲಾಗದಷ್ಟು ಸಿದ್ದರಾಮಯ್ಯ ಅಸಹಾಯಕರಾಗಿದ್ದಾರೆ ಎಂದಿದ್ದಾರೆ.

ಇಷ್ಟೇ ಅಲ್ಲದೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣ ಅವಕಾಶ ಸಿಕ್ಕಾಗಲೆಲ್ಲಾ ಬಂಡಾಯದ ಬಾವುಟ ಹಾರಿಸಿ ಮುಖ್ಯಮಂತ್ರಿ ಗಾದಿ ಕಿತ್ತುಕೊಳ್ಳುವ ಮಾತನಾಡುತ್ತಾ ಕಾಲೆಳೆಯುತ್ತಿದ್ದರೂ ಏನೂ ಮಾಡಲಾಗದ ಅಸಹಾಯಕ ಸ್ಥಿತಿ ಸಿದ್ದರಾಮಯ್ಯ ಅವರದ್ದಾಗಿದೆ.

ನಿಮಗೆ ತಾಕತ್ತಿದ್ದರೆ, ನೀವು ಹೇಳಿಕೊಳ್ಳುವಂತೆ ಸ್ಟ್ರಾಂಗ್ ಮುಖ್ಯಮಂತ್ರಿಯೇ ಆಗಿದ್ದರೆ, 'ನಾನೇ ಐದು ವರ್ಷ ಮುಖ್ಯಮಂತ್ರಿ' ಎಂಬುದಾಗಿ ಒಮ್ಮೆ ಹೇಳಿ ನೋಡೋಣ ಎಂದು ಸವಾಲು ಹಾಕಿದ್ದಾರೆ. ಬಿಜೆಪಿ ನಾಯಕರಿಗೆ ನರೇಂದ್ರ ಮೋದಿ ಅವರೇ ಮತ್ತೊಮ್ಮೆ ಐದು ವರ್ಷಕ್ಕೆ ದೇಶದ ಬಲಿಷ್ಠ ಪ್ರಧಾನಿಯಾಗಿ ಮುಂದುವರೆಯುತ್ತಾರೆ ಎಂಬುದಾಗಿ ವಿಶ್ವಾಸದಿಂದ ಹೇಳುವ ಧೈರ್ಯ ಇದೆ ಎಂದು ಅಶೋಕ್ ಕುಟುಕಿದ್ದಾರೆ.

ಈ ರೀತಿ ನಿಮಗೆ ಹೇಳಲು ಖಂಡಿತ ಆಗಲ್ಲ, ಅದಕ್ಕೆ ತಮ್ಮನ್ನು ಈ ರಾಜ್ಯ ಕಂಡ ಅತ್ಯಂತ ದುರ್ಬಲ ಮುಖ್ಯಮಂತ್ರಿ ಎಂಬುದಾಗಿ ಜನ ಮಾತಾಡಿಕೊಳ್ಳುವುದು ಎಂದು ಟೀಕಿಸಿದ್ದಾರೆ.

# ಶೋಭಾ ಹೇಳಿಕೆ : ಕ್ರಮಕ್ಕೆ ಆಯೋಗ ಸೂಚನೆ



ನವದೆಹಲಿ, ಮಾ. 20 – ಕೇಂದ್ರ ಸಚಿವೆ ಹಾಗೂ ಬಿಜೆಪಿ ನಾಯಕಿ ಶೋಭಾ ಕರಂದ್ಲಾಜೆ ನೀತಿ ಸಂಹಿತೆ ಉಲ್ಲಂಘಿಸಿರುವುದಾಗಿ ಡಿ.ಎಂ.ಕೆ. ನೀಡಿರುವ ದೂರಿನ ಬಗ್ಗೆ ತಕ್ಷಣವೇ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಚುನಾವಣಾ ಆಯೋಗ ತಿಳಿಸಿದೆ.

ಈ ಬಗ್ಗೆ 48 ಗಂಟೆಗಳ ಒಳಗಾಗಿ ಕ್ರಮ ತೆಗೆದುಕೊಂಡ ವರದಿ ಸಲ್ಲಿಸಬೇಕು ಎಂದು ಚುನಾವಣಾ ಆಯೋಗ ಹೇಳಿದೆ.

ತಮಿಳುನಾಡಿನ ಓರ್ವ ವ್ಯಕ್ತಿ ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದ ಮಾರ್ಚ್ 1ರ ಸ್ಫೋಟಕ್ಕೆ ಕಾರಣ ಎಂದು ಕರಂದ್ಲಾಜೆ ಹೇಳಿರುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಡಿ.ಎಂ.ಕೆ. ದೂರು ನೀಡಿತ್ತು.

ಬೆಂಗಳೂರಿನಲ್ಲಿ ಪ್ರತಿಭಟನೆಯ ವೇಳೆ ಮಾತನಾಡಿದ್ದ ಕರಂದ್ಲಾಜೆ, ಕರ್ನಾಟಕದಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿದೆ. ತಮಿಳುನಾಡಿನ ಜನ ಬಂದು ಇಲ್ಲಿ ಬಾಂಬ್ ಅಳವಡಿಸುತ್ತಾರೆ, ದೆಹಲಿಯವರು ಬಂದು ಪಾಕಿಸ್ತಾನ್ ಜಿಂಬಾಬಾದ್ ಘೋಷಣೆ ಕೂಗುತ್ತಾರೆ ಹಾಗೂ ಕೇರಳದವರು ಬಂದು ಆಸಿಡ್ ದಾಳಿ ನಡೆಸುತ್ತಾರೆ ಎಂದಿದ್ದರು. ನಂತರ ಅವರು ತಮ್ಮ ಹೇಳಿಕೆಗಳಿಗೆ ಕ್ಷಮೆ ಯಾಚಿಸಿ, ಹೇಳಿಕೆಗಳನ್ನು ವಾಪಸ್ ಪಡೆದಿದ್ದರು.

ಸಮುದಾಯಗಳ ನಡುವೆ ದ್ವೇಷ ತರುವ ಮಾತುಗಳನ್ನು ಆಡಿದ ಆರೋಪದ ಮೇಲೆ ಮಧುರೈ ಪೊಲೀಸರು ಶೋಭಾ ಕರಂದ್ಲಾಜೆ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ದೂರೊಂದರ ಆಧಾರದ ಮೇಲೆ ತಮಿಳುನಾಡಿನ ಮಧುರೈ ಪೊಲೀಸ್ ಸೈಬರ್ ಅಪರಾಧ ದಳ ಎಫ್.ಐ.ಆರ್. ದಾಖಲಿಸಿದೆ.



## ಯೋಗಾಸನ : ಕೆ.ವೈ.ಸೃಷ್ಟಿ ಪ್ರಥಮ

ಹರಿಹರ, ಮಾ.20- ಈಚೆಗೆ ಶಿವಮೊಗ್ಗದಲ್ಲಿ ನಡೆದ ರಾಷ್ಟ್ರ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಹರಿಹರದ ಶ್ರೀ ನೀಲಕಂಠೇಶ್ವರ ಪಬ್ಲಿಕ್ ಸ್ಕೂಲ್ ನ 8ನೇ ತರಗತಿ ವಿದ್ಯಾರ್ಥಿನಿ ಕೆ.ವೈ.ಸೃಷ್ಟಿ ಪ್ರಥಮ ಸ್ಥಾನ ಪಡೆದಿದ್ದಾರೆ.

## ಎಸ್ಸೆಸ್ಸೆಲ್ಸಿ ಪರೀಕ್ಷೆ : ನಿಷೇಧಾಜ್ಞೆ ಜಾರಿ

ದಾವಣಗೆರೆ, ಮಾ. 20 - ಎಸ್.ಎಸ್. ಎಲ್.ಸಿ ಪರೀಕ್ಷೆ ಇದೇ ದಿನಾಂಕ 25 ರಿಂದ ಏಪ್ರಿಲ್ 6 ರವರೆಗೆ ನಡೆಯಲಿದ್ದು, ಪರೀಕ್ಷೆಯನ್ನು ಸುಗಮವಾಗಿ ಮತ್ತು ಪರೀಕ್ಷಾ ಅವ್ಯವಹಾರ ತಡೆಗಟ್ಟಲು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಿ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಅವರು ಆದೇಶಿಸಿದ್ದಾರೆ.

ಕೇಂದ್ರಗಳ ಸುತ್ತಮುತ್ತ ಇರುವ ಜೆರಾಕ್ಸ್ ಅಂಗಡಿ, ಇಂಟರ್ ನೆಟ್ ಕೇಂದ್ರ ಮುಚ್ಚುವಂತೆ ಆದೇಶಿಸಲಾಗಿದೆ.

## ತೆರಿಗೆ ಮರು ಪರಿಶೀಲನೆ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಕಾಂಗ್ರೆಸ್ ಅರ್ಜಿ

ನವದೆಹಲಿ, ಮಾ. 20 - ತನ್ನ ವಿರುದ್ಧ ಅಧಿಕಾರಿಗಳು ನಡೆಸುತ್ತಿರುವ ತೆರಿಗೆ ಮರು ಪರಿಶೀಲನೆ ಪ್ರಕ್ರಿಯೆ ಪ್ರಶ್ನಿಸಿ ಕಾಂಗ್ರೆಸ್ ಪಕ್ಷ ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ. ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಹಾಗೂ ನ್ಯಾಯಮೂರ್ತಿಗಳಾದ ಮನಮೀತ್ ಪಿ.ಎಸ್. ಅರೋರ ಅವರನ್ನು ಒಳಗೊಂಡ ಪೀಠದ ಎದುರು ಅರ್ಜಿ ದಾಖಲಿಸಲಾಗಿದೆ. ಗುರುವಾರ ಈ ಬಗ್ಗೆ ವಿಚಾರಣೆ ನಡೆಯಲಿದೆ.

ಆದಾಯ ತೆರಿಗೆ ಅಧಿಕಾರಿಗಳು ನಾಲ್ಕು ವರ್ಷಗಳ ತೆರಿಗೆ ವಿವರ ಮರು ಪರಿಶೀಲನೆ ಆರಂಭಿಸಿದ್ದಾರೆ. ಈ ಬಗ್ಗೆ ವಿಚಾರಣೆ ನಡೆಸಬೇಕು ಎಂದು ಕಾಂಗ್ರೆಸ್ ಮನವಿ ಮಾಡಿಕೊಂಡಿತ್ತು.

## ಜಾತ್ರೆಯಲ್ಲಿ ಮಜ್ಜಿಗೆ

ಶ್ರೀ ದುರ್ಗಾಂಬಿಕ ದೇವಿ ಜಾತ್ರೆಯ ಪ್ರಯುಕ್ತ ಇಂದಿನಿಂದ ಇದೇ ದಿನಾಂಕ 24ರ ವರೆಗೆ ಬೆಳಿಗ್ಗೆ 11 ರಿಂದ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಮುಂಭಾಗದಲ್ಲಿ ಸಾರ್ವಜನಿಕರಿಗೆ ಮಜ್ಜಿಗೆ ವಿತರಿಸಲಾಗುವುದು.

## ಫ್ರಾನ್ಸ್ : ಸುದ್ದಿ ಪ್ರಕಾಶಕರಿಗೆ 272 ದಶಲಕ್ಷ ಡಾಲರ್ ಪಾವತಿಸಲು ಗೂಗಲ್‌ಗೆ ಆದೇಶ

ಪ್ಯಾರಿಸ್, ಮಾ. 20 - ಫ್ರಾನ್ಸ್ ಸುದ್ದಿ ಪ್ರಕಾಶಕರಿಗೆ ನೀಡಬೇಕಾದ ಪಾವತಿಗೆ ಸಂಬಂಧಿಸಿದಂತೆ ಗೂಗಲ್‌ನ ಸ್ಪರ್ಧಾ ಪ್ರಾಧಿಕಾರ 272 ದಶಲಕ್ಷ ಡಾಲರ್‌ಗಳ ದಂಡ ವಿಧಿಸಿದೆ.

ಗೂಗಲ್ ಕಂಪನಿಯು ಸಂಧಾನ ಚೌಕಟ್ಟಿಗೆ ಅನುಗುಣವಾಗಿ ಹಣ ಪಾವತಿಸಿಲ್ಲ. ಹೀಗಾಗಿ 272 ದಶಲಕ್ಷ ಡಾಲರ್ ದಂಡ ತೆರಬೇಕು ಎಂದು ಫ್ರಾನ್ಸ್ ಸ್ಪರ್ಧಾ ಪ್ರಾಧಿಕಾರ ಆದೇಶಿಸಿದೆ.

ಗೂಗಲ್ ಕಂಪನಿಯು ಸುದ್ದಿ ಪ್ರಕಾಶಕರ ಜೊತೆ ಸಂಧಾನ ಪ್ರಕ್ರಿಯೆಗೆ ಮುಂದಾಗಬೇಕು ಎಂದು ಪ್ರಾಧಿಕಾರ 2020ರಲ್ಲಿ ಆದೇಶಿಸಿತ್ತು.

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**

**ಜೆ. ಸೋಮನಾಥ್,** ವೀರಶೈವ ಸಮಾಜದ ಹಿರಿಯ ಮುಖಂಡರು **ಮತ್ತು ಮಕ್ಕಳು**

ನಂ. 3194/2, 10ನೇ ಮೇನ್, 3ನೇ ಕ್ರಾಸ್, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ.

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 13.03.2024ನೇ ಬುಧವಾರ ಬೆಳಿಗ್ಗೆ 4.30ಕ್ಕೆ ನನ್ನ ಧರ್ಮಪತ್ನಿಯಾದ

**ಶ್ರೀಮತಿ ಜೆ. ಶಾಂತಮ್ಮನವರು**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಸಮಾರಾಧನೆ'ಯನ್ನು ದಿನಾಂಕ : 21.03.2024ನೇ ಗುರುವಾರ ಮಧ್ಯಾಹ್ನ 12 ಕ್ಕೆ ದಾವಣಗೆರೆ ಸಿಟಿ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀ ಜೆ. ಸೋಮನಾಥ್ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



ಜನನ : 01.02.1947 ಮರಣ : 13.03.2024

## ಅಪಘಾತಗಳಲ್ಲಿ ನೆರವಾಗುವ ರಕ್ಷಕರಿಗೆ ಫ್ಲೆಕ್ಸ್ ಪ್ರಚಾರ

ರಾಯಪುರ, ಮಾ. 20 - ಅಪಘಾತಗಳ ಸಂದರ್ಭದಲ್ಲಿ ನೆರವಾಗುವ ಜೀವರಕ್ಷಕರ ಭಾವಚಿತ್ರಗಳನ್ನು ಫ್ಲೆಕ್ಸ್‌ಗಳ ಮೂಲಕ ಪ್ರಕಟಿಸಿ ಗೌರವಿಸಲು ಛತ್ತೀಸ್‌ಘಡದ ರಾಯಪುರ ಪೊಲೀಸರು ನಿರ್ಧರಿಸಿದ್ದಾರೆ.

ಅಪಘಾತದ ಸಂದರ್ಭದಲ್ಲಿ ಸಂತ್ರಸ್ತರಿಗೆ ನೆರವು ನೀಡುವುದಕ್ಕೆ ಉತ್ತೇಜಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಜೀವ ರಕ್ಷಕರ ಚಿತ್ರ ಹಾಗೂ ಅವರು ಕೈಗೊಂಡ ಉತ್ತಮ ಕಾರ್ಯಗಳ ವಿವರಗಳನ್ನು ಫ್ಲೆಕ್ಸ್ ಮೂಲಕ ಜನರಿಗೆ ತಿಳಿಸಲಾಗುವುದು. ಗಾಯಾಳುಗಳಿಗೆ ನೆರವಾಗುವ ಮೂಲಕ ಉತ್ತಮ ಮನುಷ್ಯರಾಗಿ ಎಂಬ ಸಂದೇಶ ನೀಡಲು ಪೊಲೀಸರು ಮುಂದಾಗಿದ್ದಾರೆ. ಅಪಘಾತಕ್ಕೆ ಸಿಲುಕಿದವರಿಗೆ ನೆರವಾದಲ್ಲಿ ಕಾನೂನು ಸಮಸ್ಯೆ ಎದುರಿಸಬೇಕಾಗುತ್ತದೆ ಎಂಬ ತಪ್ಪು ಕಲ್ಪನೆ ನಿವಾರಿಸಲು ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

## ತಾರೇಹಳ್ಳಿ : ಇಂದು ಅನ್ನ ಸಂತರ್ಪಣೆ

ಜಗಳೂರು ತಾಲ್ಲೂಕಿನ ತಾರೇಹಳ್ಳಿ ಗ್ರಾಮದಲ್ಲಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಮಹಾರಥೋತ್ಸವದ ಪ್ರಯುಕ್ತ ಇಂದು ಗುರುವಾರ ಅನ್ನ ಸಂತರ್ಪಣೆ, ನಾಳೆ ಶುಕ್ರವಾರ ಓಕುಳಿ ಉತ್ಸವ ಜರುಗಲಿದೆ.

**SCIENCE ACADEMY (R.)**

(A UNIQUE CENTRE FOR P.U. CLASSES)

# 307 / 2B, I FLOOR, 2ND MAIN, P.J. EXTN, NEAR STADIUM, DAVANGERE – 4

**ADMISSION STARTED FOR**

**CET-NEET**

**CRASH COURSE**

**Classes start from 21st March 2024**

- Subject Experts will engage the classes.
- Well prepared and designed study material will be given.
- Alternate day's tests and exams will be conducted.
- Even an average student can also understand the classes easily.
- Limited seats only, Hurry up…

For more Details contact:

Office: 08192 – 457761

Mobile: 9980368779, 9448178087

"We don't have any other branches in Davangere in the name of Academy".




Chetak

P.B. Road, Davangere.

72591–37999, IVR 80950–55555

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas